भारत का राजपत्र
The Gazette of India

ಭಾರತ ರಾಜಪತ್ರ

**(Extraordinary)**
(ವಿಶೇಷ ಸಂಚಿಕೆ)

**भाग IX अनुभाग 1**
**PART IX SECTION 1**
ಭಾಗ **IX** ವಿಭಾಗ 1

**प्राधिकार से प्रकाशित**
**Published by Authority**
ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ

| | | |
|---|---|---|
| सं 1, नई दिल्ली, शुक्रवार, मई 17, 2024<br>No.1, New Delhi, Friday, May 17, 2024<br>ನಂ.1, ನವದೆಹಲಿ, ಶುಕ್ರವಾರ, ಮೇ 17, 2024 | वैशाख 09, 1946 (शक)<br>Vaishakha 09, 1946 (saka)<br>ವೈಶಾಖ 09, 1946 (ಶಕ) | खंड.55<br>Vol. 55<br>ಸಂಪುಟ.55 |

**Ministry of Law and Justice**
(Legislative Department)
New Delhi, 17th May, 2024

**ಕಾನೂನು ಮತ್ತು ನ್ಯಾಯ ಮಂತ್ರಾಲಯ**

(ವಿಧಾಯೀ ಇಲಾಖೆ)

**ನವದೆಹಲಿ, 17ನೇ ಮೇ, 2024**

The Translation in Kannada of the following Acts, namely:- (1) THE DISASTER MANAGEMENT ACT, 2005 (NO.53 OF 2005) (2) THE STREET VENDORS (PROTECTION OF LIVELIHOOD AND REGULATION OF STREET VENDING) ACT, 2014 (NO.7 OF 2014) (3)THE COMMERCIAL COURTS ACT, 2015 (NO.4 OF 2016) (4) THE TRIBUNALS REFORMS ACT, 2021 (NO.33 OF 2021) (5) THE SURROGACY (REGULATION) ACT, 2021 (NO.47 OF 2021) - are hereby published under the authority of the President and shall be deemed to be authoritative text thereof in Kannada under clause (a) of section 2 of the Authoritative Texts (Central Laws) Act, 1973 (50 of 1973).

## ನ್ಯಾಯಾಧಿಕರಣಗಳ ಸುಧಾರಣಾ ಅಧಿನಿಯಮ, 2021

**(2021ರ ಸಂಖ್ಯೆ 33)**

[13ನೇ ಆಗಸ್ಟ್, 2021.]

ಚಲನಚಿತ್ರ ಅಧಿನಿಯಮ, 1952, ಸೀಮಾಸುಂಕ ಅಧಿನಿಯಮ, 1962, ಭಾರತ ವಿಮಾನ ನಿಲ್ದಾಣಗಳ ಪ್ರಾಧಿಕಾರ ಅಧಿನಿಯಮ, 1994, ವ್ಯಾಪಾರ ಚಿಹ್ನೆಗಳ ಅಧಿನಿಯಮ, 1999 ಮತ್ತು ಸಸ್ಯ ಪ್ರಭೇದಗಳು ಮತ್ತು ರೈತರ ಹಕ್ಕುಗಳ ಸಂರಕ್ಷಣಾ ಅಧಿನಿಯಮ, 2001 ಮತ್ತು ಕೆಲವು ಇತರ ಅಧಿನಿಯಮಗಳಿಗೆ ತಿದ್ದುಪಡಿ ಮಾಡುವ ಒಂದು ಅಧಿನಿಯಮ.

ಇದು ಭಾರತ ಗಣರಾಜ್ಯದ ಎಪ್ಪತ್ತೆರಡನೇ ವರ್ಷದಲ್ಲಿ ಸಂಸತ್ತಿನಿಂದ ಈ ಮುಂದಿನಂತೆ ಅಧಿನಿಯಮಿತವಾಗತಕ್ಕದ್ದು:–

### ಅಧ್ಯಾಯ I

### ಪ್ರಾರಂಭಿಕ

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.–** (1) ಈ ಅಧಿನಿಯಮವನ್ನು ನ್ಯಾಯಾಧಿಕರಣಗಳ ಸುಧಾರಣಾ ಅಧಿನಿಯಮ, 2021 ಎಂದು ಕರೆಯತಕ್ಕದ್ದು.

(2) ಇದು, 2021ರ ಏಪ್ರಿಲ್ 4ರಂದು ಜಾರಿಗೆ ಬಂದಿರುವುದಾಗಿ ಭಾವಿಸತಕ್ಕದ್ದು.

**2. ಪರಿಭಾಷೆಗಳು.–** ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,–

(ಎ) "ಅಧ್ಯಕ್ಷ" ಎಂಬುದು ನ್ಯಾಯಾಧಿಕರಣದ ಚೇರ್‌ಪರ್ಸನ್, ಚೇರ್‌ಮನ್, ಪ್ರೆಸಿಡೆಂಟ್ ಮತ್ತು ಪ್ರಿಸೈಡಿಂಗ್ ಅಧಿಕಾರಿಯನ್ನು ಒಳಗೊಳ್ಳುತ್ತದೆ;

(ಬಿ) "ಸದಸ್ಯ" ಎಂಬುದು ನ್ಯಾಯಾಧಿಕರಣದ ವೈಸ್‌ಚೇರ್‌ಮನ್, ವೈಸ್‌ಚೇರ್‌ಪರ್ಸನ್, ವೈಸ್‌ಪ್ರೆಸಿಡೆಂಟ್, ಲೆಕ್ಕ ಸದಸ್ಯ, ಆಡಳಿತಾತ್ಮಕ ಸದಸ್ಯ, ನ್ಯಾಯಿಕ ಸದಸ್ಯ, ತಜ್ಞ ಸದಸ್ಯ, ಕಾನೂನು ಸದಸ್ಯ, ರಾಜಸ್ವ ಸದಸ್ಯ ಮತ್ತು ತಾಂತ್ರಿಕ ಸದಸ್ಯನನ್ನು ಒಳಗೊಳ್ಳುತ್ತದೆ;

(ಸಿ) "ಅಧಿಸೂಚಿತ ದಿನಾಂಕ" ಎಂದರೆ, 4ನೇ ಏಪ್ರಿಲ್, 2021;

(ಡಿ) "ಅನುಸೂಚಿ" ಎಂದರೆ, ಈ ಅಧಿನಿಯಮಕ್ಕೆ ಅನುಬಂಧಿಸಲಾದ ಅನುಸೂಚಿ;

(ಇ) "ನ್ಯಾಯಾಧಿಕರಣ" ಎಂದರೆ, ಮೊದಲನೇ ಅನುಸೂಚಿಯ (2)ನೇ ಅಂಕಣದಲ್ಲಿ ನಿರ್ದಿಷ್ಟಪಡಿಸಿರುವಂತೆ ನ್ಯಾಯಾಧಿಕರಣ, ಮೇಲ್ಮನವಿ ನ್ಯಾಯಾಧಿಕರಣ ಅಥವಾ ಪ್ರಾಧಿಕಾರ.

### ಅಧ್ಯಾಯ II

### ನ್ಯಾಯಾಧಿಕರಣದ ಅಧ್ಯಕ್ಷ ಮತ್ತು ಸದಸ್ಯರ ಸೇವಾ ಷರತ್ತುಗಳು

**3. ನ್ಯಾಯಾಧಿಕರಣದ ಅಧ್ಯಕ್ಷ ಮತ್ತು ಸದಸ್ಯರ ಅರ್ಹತೆಗಳು, ನೇಮಕಾತಿ, ಇತ್ಯಾದಿ.–** (1) ಯಾವುದೇ ನ್ಯಾಯಾಲಯದ ಯಾವುದೇ ತೀರ್ಪು, ಆದೇಶ ಅಥವಾ ಡಿಕ್ರಿಯಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನಲ್ಲಿ ಏನೇ ಒಳಗೊಂಡಿದ್ದಾಗ್ಯೂ, ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ನ್ಯಾಯಾಧಿಕರಣದ ಅಧ್ಯಕ್ಷ ಮತ್ತು ಸದಸ್ಯನ ಸಂಬಂಧಪಟ್ಟ ಕ್ಷೇತ್ರದಲ್ಲಿನ ಅನುಭವ, ವಿಶೇಷ ತಜ್ಞತೆಯನ್ನು ಮತ್ತು ಈ ಅಧಿನಿಯಮದ ಉಪಬಂಧಗಳನ್ನು ಪರಿಗಣನೆಗೆ ತೆಗೆದುಕೊಂಡು, ಅವರ ಅರ್ಹತೆಗಳು, ನೇಮಕಾತಿ, ಸಂಬಳಗಳು ಮತ್ತು ಭತ್ಯೆಗಳು, ರಾಜೀನಾಮೆ, ತೆಗೆದುಹಾಕುವಿಕೆ ಮತ್ತು ಇತರ ಸೇವಾ ಷರತ್ತುಗಳಿಗಾಗಿ ಉಪಬಂಧ ಕಲ್ಪಿಸಲು ನಿಯಮಗಳನ್ನು ರಚಿಸಬಹುದು:

ಪರಂತು, ಐವತ್ತು ವರ್ಷ ವಯಸ್ಸನ್ನು ಪೂರೈಸಿರದಂಥ ವ್ಯಕ್ತಿಯು ಅಧ್ಯಕ್ಷನಾಗಿ ಅಥವಾ ಸದಸ್ಯನಾಗಿ ನೇಮಕಗೊಳ್ಳುವುದಕ್ಕೆ ಅರ್ಹನಾಗಿರತಕ್ಕದ್ದಲ್ಲ.

(2) ನ್ಯಾಯಾಧಿಕರಣದ ಅಧ್ಯಕ್ಷ ಮತ್ತು ಸದಸ್ಯನು, ಕೇಂದ್ರ ಸರ್ಕಾರವು, ನಿಯಮಗಳ ಮೂಲಕ ಉಪಬಂಧಿಸಬಹುದಾದ ರೀತಿಯಲ್ಲಿ, (3)ನೇ ಉಪಪ್ರಕರಣದ ಮೇರೆಗೆ ರಚಿತವಾದ ಶೋಧನೆ–ಹಾಗೂ–ಆಯ್ಕೆ ಸಮಿತಿಯ ಶಿಫಾರಸ್ಸಿನ ಮೇಲೆ ಕೇಂದ್ರ ಸರ್ಕಾರದಿಂದ ನೇಮಕಗೊಳ್ಳತಕ್ಕದ್ದು.

(3) ಶೋಧನೆ–ಹಾಗೂ–ಆಯ್ಕೆ ಸಮಿತಿಯು, ರಾಜ್ಯ ಆಡಳಿತ ನ್ಯಾಯಾಧಿಕರಣಕ್ಕಾಗಿ ಹೊರತು, ಈ ಮುಂದಿನವರನ್ನು ಒಳಗೊಂಡಿರತಕ್ಕದ್ದು,–

(ಎ) ಅಧ್ಯಕ್ಷ, ಅವನು ಭಾರತದ ಮುಖ್ಯ ನ್ಯಾಯಮೂರ್ತಿ ಅಥವಾ ಅವನು ನಾಮನಿರ್ದೇಶನ ಮಾಡುವ ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶನಾಗಿರತಕ್ಕದ್ದು;

(ಬಿ) ಇಬ್ಬರು ಸದಸ್ಯರು, ಭಾರತ ಸರ್ಕಾರದ ಕಾರ್ಯದರ್ಶಿಗಳಾಗಿದ್ದು, ಆ ಸರ್ಕಾರದಿಂದ ನಾಮನಿರ್ದೇಶಿತರಾಗಿರಬೇಕು;

(ಸಿ) ಒಬ್ಬ ಸದಸ್ಯ,–

(i) ನ್ಯಾಯಾಧಿಕರಣದ ಅಧ್ಯಕ್ಷನ ನೇಮಕಾತಿ ಸಂದರ್ಭದಲ್ಲಿ, ಆ ನ್ಯಾಯಾಧಿಕರಣದ ನಿರ್ಗಮಿತ ಅಧ್ಯಕ್ಷನಾಗಿರತಕ್ಕದ್ದು; ಅಥವಾ

(ii) ನ್ಯಾಯಾಧಿಕರಣದ ಸದಸ್ಯನ ನೇಮಕಾತಿ ಸಂದರ್ಭದಲ್ಲಿ, ಆ ನ್ಯಾಯಾಧಿಕರಣದ ಹಾಲಿ ಅಧ್ಯಕ್ಷನಾಗಿರತಕ್ಕದ್ದು; ಅಥವಾ

(iii) ನ್ಯಾಯಾಧಿಕರಣದ ಅಧ್ಯಕ್ಷನು ಪುನರ್ ನೇಮಕಾತಿ ಕೋರುವ ಸಂದರ್ಭದಲ್ಲಿ, ಭಾರತದ ಮುಖ್ಯ ನ್ಯಾಯಮೂರ್ತಿಯಿಂದ ನಾಮನಿರ್ದೇಶಿತನಾಗುವ ಸರ್ವೋಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಾಧೀಶ ಅಥವಾ ಉಚ್ಚ ನ್ಯಾಯಾಲಯದ ನಿವೃತ್ತ ಮುಖ್ಯ ನ್ಯಾಯಮೂರ್ತಿಯಾಗಿರತಕ್ಕದ್ದು:

ಪರಂತು, ಈ ಮುಂದಿನ ಸಂದರ್ಭಗಳಲ್ಲಿ, ಅಂಥ ಸದಸ್ಯನು ಯಾವಾಗಲೂ ಭಾರತದ ಮುಖ್ಯ ನ್ಯಾಯಮೂರ್ತಿಯಿಂದ ನಾಮನಿರ್ದೇಶಿತನಾಗುವ ಸರ್ವೋಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಾಧೀಶ ಅಥವಾ ಉಚ್ಚ ನ್ಯಾಯಾಲಯದ ನಿವೃತ್ತ ಮುಖ್ಯ ನ್ಯಾಯಮೂರ್ತಿಯಾಗಿರತಕ್ಕದ್ದು, ಎಂದರೆ:–

(i) ಕೈಗಾರಿಕಾ ವಿವಾದಗಳ ಅಧಿನಿಯಮ, 1947 (1947 ರ 14) ರ ಮೇರೆಗೆ ಕೇಂದ್ರ ಸರ್ಕಾರದಿಂದ ರಚಿತವಾದ ಕೈಗಾರಿಕಾ ನ್ಯಾಯಾಧಿಕರಣ;

(ii) ಸಾಲಗಳ ವಸೂಲಾತಿ ಮತ್ತು ದಿವಾಳಿತನ ಅಧಿನಿಯಮ, 1993 (1993ರ 51) ರ ಮೇರೆಗೆ ಸ್ಥಾಪಿತವಾದ ಸಾಲ ವಸೂಲಾತಿ ನ್ಯಾಯಾಧಿಕರಣ ಮತ್ತು ಸಾಲ ವಸೂಲಾತಿ ಮೇಲ್ಮನವಿ ನ್ಯಾಯಾಧಿಕರಣ;

(iii) ಸಂದರ್ಭಾನುಸಾರ, ನ್ಯಾಯಾಧಿಕರಣದ ಅಧ್ಯಕ್ಷ ಅಥವಾ ನಿರ್ಗಮಿತ ಅಧ್ಯಕ್ಷನು, ಸರ್ವೋಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಾಧೀಶ ಅಥವಾ ಉಚ್ಚ ನ್ಯಾಯಾಲಯದ ನಿವೃತ್ತ ಮುಖ್ಯ ನ್ಯಾಯಮೂರ್ತಿ ಅಥವಾ ನ್ಯಾಯಾಧೀಶನಾಗಿರದ ಸಂದರ್ಭದಲ್ಲಿ; ಮತ್ತು

(iv) ಕೇಂದ್ರ ಸರ್ಕಾರವು ಆ ನ್ಯಾಯಾಧಿಕರಣದ ಶೋಧನೆ–ಹಾಗೂ–ಆಯ್ಕೆ ಸಮಿತಿಯ ಅಧ್ಯಕ್ಷನೊಂದಿಗೆ ಸಮಾಲೋಚಿಸಿ ಅಧಿಸೂಚಿಸಬಹುದಾದಂಥ ಇತರ ನ್ಯಾಯಾಧಿಕರಣಗಳ ಸಂದರ್ಭಗಳಲ್ಲಿ; ಮತ್ತು

(ಡಿ) ಯಾವ ಮಂತ್ರಾಲಯ ಅಥವಾ ಇಲಾಖೆಯಡಿಯಲ್ಲಿ ನ್ಯಾಯಾಧಿಕರಣವನ್ನು ರಚಿಸಲಾಗಿದೆಯೋ ಅಥವಾ ಸ್ಥಾಪಿಸಲಾಗಿದೆಯೋ ಆ ಮಂತ್ರಾಲಯ ಅಥವಾ ಇಲಾಖೆಯಲ್ಲಿನ ಭಾರತ ಸರ್ಕಾರದ ಕಾರ್ಯದರ್ಶಿ, ಸದಸ್ಯ–ಕಾರ್ಯದರ್ಶಿ:

ಪರಂತು, ರಾಜ್ಯ ಆಡಳಿತ ನ್ಯಾಯಾಧಿಕರಣಕ್ಕೆ ಸಂಬಂಧಿಸಿದ ಶೋಧನೆ–ಹಾಗೂ–ಆಯ್ಕೆ ಸಮಿತಿಯು ಈ ಮುಂದಿನವರನ್ನು ಒಳಗೊಳ್ಳತಕ್ಕದ್ದು,–

(ಎ) ಸಂಬಂಧಪಟ್ಟ ರಾಜ್ಯದ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿ– ಅಧ್ಯಕ್ಷ;

(ಬಿ) ಸಂಬಂಧಪಟ್ಟ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ– ಸದಸ್ಯ;

(ಸಿ) ಸಂಬಂಧಪಟ್ಟ ರಾಜ್ಯದ ಲೋಕ ಸೇವಾ ಆಯೋಗದ ಅಧ್ಯಕ್ಷ–ಸದಸ್ಯ;

(ಡಿ) ಒಬ್ಬ ಸದಸ್ಯ,–

(i) ನ್ಯಾಯಾಧಿಕರಣದ ಅಧ್ಯಕ್ಷನ ನೇಮಕಾತಿ ಸಂದರ್ಭದಲ್ಲಿ, ಆ ನ್ಯಾಯಾಧಿಕರಣದ ನಿರ್ಗಮಿತ ಅಧ್ಯಕ್ಷನಾಗಿರತಕ್ಕದ್ದು; ಅಥವಾ

(ii) ನ್ಯಾಯಾಧಿಕರಣದ ಸದಸ್ಯನ ನೇಮಕಾತಿ ಸಂದರ್ಭದಲ್ಲಿ, ಆ ನ್ಯಾಯಾಧಿಕರಣದ ಹಾಲಿ ಅಧ್ಯಕ್ಷನಾಗಿರತಕ್ಕದ್ದು; ಅಥವಾ

(iii) ನ್ಯಾಯಾಧಿಕರಣದ ಅಧ್ಯಕ್ಷನ ಪುನರ್ ನೇಮಕಾತಿ ಕೋರುವ ಸಂದರ್ಭದಲ್ಲಿ, ಸಂಬಂಧಪಟ್ಟ ರಾಜ್ಯದ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿಯಿಂದ ನಾಮನಿರ್ದೇಶಿತನಾದ ಉಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಾಧೀಶನಾಗಿರತಕ್ಕದ್ದು:

ಪರಂತು, ಅಂಥ ಸದಸ್ಯನು, ಸಂದರ್ಭಾನುಸಾರ, ರಾಜ್ಯ ಆಡಳಿತ ನ್ಯಾಯಾಧಿಕರಣದ ಅಧ್ಯಕ್ಷ ಅಥವಾ ನಿರ್ಗಮಿತ ಅಧ್ಯಕ್ಷನು, ಉಚ್ಚ ನ್ಯಾಯಾಲಯದ ನಿವೃತ್ತ ಮುಖ್ಯ ನ್ಯಾಯಮೂರ್ತಿ ಅಥವಾ ನ್ಯಾಯಾಧೀಶನಾಗಿರದಿದ್ದರೆ, ಯಾವಾಗಲೂ ಸಂಬಂಧಪಟ್ಟ ರಾಜ್ಯದ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿಯಿಂದ ನಾಮನಿರ್ದೇಶಿತನಾದ, ಉಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಾಧೀಶನಾಗಿರತಕ್ಕದ್ದು;

(ಇ) ಸಂಬಂಧಪಟ್ಟ ರಾಜ್ಯದ ಸಾಮಾನ್ಯ ಆಡಳಿತ ಇಲಾಖೆಯ ಕಾರ್ಯದರ್ಶಿ ಅಥವಾ ಪ್ರಧಾನ ಕಾರ್ಯದರ್ಶಿ– ಸದಸ್ಯ–ಕಾರ್ಯದರ್ಶಿ.

(4) ಶೋಧನೆ–ಹಾಗೂ–ಆಯ್ಕೆ ಸಮಿತಿಯ ಅಧ್ಯಕ್ಷನು ನಿರ್ಣಾಯಕ ಮತವನ್ನು ಹೊಂದಿರತಕ್ಕದ್ದು.

(5) ಶೋಧನೆ–ಹಾಗೂ–ಆಯ್ಕೆ ಸಮಿತಿಯ ಸದಸ್ಯ ಕಾರ್ಯದರ್ಶಿಯು ಯಾವುದೇ ಮತ ಹೊಂದಿರತಕ್ಕದ್ದಲ್ಲ.

(6) ಶೋಧನೆ–ಹಾಗೂ–ಆಯ್ಕೆ ಸಮಿತಿಯು ತನ್ನ ಶಿಫಾರಸ್ಸುಗಳನ್ನು ಮಾಡುವುದಕ್ಕಾಗಿ ಕಾರ್ಯವಿಧಾನವನ್ನು ನಿರ್ಧರಿಸತಕ್ಕದ್ದು.

(7) ಯಾವುದೇ ನ್ಯಾಯಾಲಯದ ಯಾವುದೇ ತೀರ್ಪು, ಆದೇಶ ಅಥವಾ ಡಿಕ್ರಿಯಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನಲ್ಲಿ ಏನೇ ಒಳಗೊಂಡಿದ್ದಾಗ್ಯೂ, ಶೋಧನೆ–ಹಾಗೂ–ಆಯ್ಕೆ ಸಮಿತಿಯು, ಸಂದರ್ಭಾನುಸಾರ, ಅಧ್ಯಕ್ಷ ಅಥವಾ ಸದಸ್ಯನ ಹುದ್ದೆಗೆ ನೇಮಕಾತಿಗಾಗಿ ಎರಡು ಹೆಸರುಗಳುಳ್ಳ ಪಟ್ಟಿಯನ್ನು ಶಿಫಾರಸ್ಸು ಮಾಡತಕ್ಕದ್ದು ಮತ್ತು ಕೇಂದ್ರ ಸರ್ಕಾರವು, ಆ ಸಮಿತಿ ಮಾಡಿದ ಶಿಫಾರಸ್ಸಿನ ಮೇಲೆ, ಆದ್ಯತೆಗನುಸಾರವಾಗಿ ಅಂಥ ಶಿಫಾರಸ್ಸಿನ ದಿನಾಂಕದಿಂದ ಮೂರು ತಿಂಗಳ ಒಳಗಾಗಿ ತೀರ್ಮಾನವನ್ನು ಕೈಗೊಳ್ಳತಕ್ಕದ್ದು.

(8) ಶೋಧನೆ–ಹಾಗೂ–ಆಯ್ಕೆ ಸಮಿತಿಯಲ್ಲಿನ ಯಾವುದೇ ಖಾಲಿ ಸ್ಥಾನ ಅಥವಾ ಸದಸ್ಯನ ಗೈರುಹಾಜರಾತಿಯ ಕಾರಣದಿಂದ ಮಾತ್ರವೇ ಯಾವುದೇ ನೇಮಕಾತಿಯು ಅಸಿಂಧುವಾಗತಕ್ಕದ್ದಲ್ಲ.

**4. ನ್ಯಾಯಾಧಿಕರಣದ ಅಧ್ಯಕ್ಷ ಅಥವಾ ಸದಸ್ಯನನ್ನು ತೆಗೆದುಹಾಕುವುದು.–** ಕೇಂದ್ರ ಸರ್ಕಾರವು, ಸಮಿತಿಯ ಶಿಫಾರಸ್ಸಿನ ಮೇಲೆ, ಯಾರೇ ಅಧ್ಯಕ್ಷ ಅಥವಾ ಸದಸ್ಯನನ್ನು, ಅವನು,–

(ಎ) ದಿವಾಳಿಯಾಗಿದ್ದಾನೆಂದು ನಿರ್ಣೀತನಾಗಿದ್ದರೆ; ಅಥವಾ

(ಬಿ) ನೈತಿಕ ಅಧಃಪತನವನ್ನೊಳಗೊಂಡ ಅಪರಾಧದ ಅಪರಾಧಿಯೆಂದು ನಿರ್ಣೀತನಾಗಿದ್ದರೆ; ಅಥವಾ

(ಸಿ) ಅಂಥ ಅಧ್ಯಕ್ಷ ಅಥವಾ ಸದಸ್ಯನಾಗಿ ಕಾರ್ಯನಿರ್ವಹಿಸುವುದಕ್ಕೆ ದೈಹಿಕವಾಗಿ ಅಥವಾ ಮಾನಸಿಕವಾಗಿ ಅಸಮರ್ಥನಾಗಿದ್ದರೆ; ಅಥವಾ

(ಡಿ) ಅಂಥ ಅಧ್ಯಕ್ಷ ಅಥವಾ ಸದಸ್ಯನಾಗಿ ತನ್ನ ಕಾರ್ಯಗಳಿಗೆ ಪ್ರತಿಕೂಲವಾಗಿ ಪರಿಣಮಿಸುವ ಸಂಭವವಿರುವಂಥ ಹಣಕಾಸಿನ ಅಥವಾ ಇತರ ಹಿತಾಸಕ್ತಿಯನ್ನು ಹೊಂದಿದ್ದರೆ; ಅಥವಾ

(ಇ) ಅವನು ಪದದಲ್ಲಿ ಮುಂದುವರಿಯುವುದರಿಂದ ಸಾರ್ವಜನಿಕ ಹಿತಾಸಕ್ತಿಗೆ ಪ್ರತಿಕೂಲವಾಗುವಂತೆ ತನ್ನ ಪದವನ್ನು ದುರ್ಬಳಕೆ ಮಾಡಿಕೊಂಡಿದ್ದರೆ

– ನಿಯಮಗಳ ಮೂಲಕ ಉಪಬಂಧಿಸಬಹುದಾದಂಥ ರೀತಿಯಲ್ಲಿ, ಅವನನ್ನು ಪದದಿಂದ, ತೆಗೆದುಹಾಕತಕ್ಕದ್ದು:

ಪರಂತು, ಅಧ್ಯಕ್ಷ ಅಥವಾ ಸದಸ್ಯನನ್ನು (ಸಿ) ಯಿಂದ (ಇ) ವರೆಗಿನ ಖಂಡಗಳಲ್ಲಿ ನಿರ್ದಿಷ್ಟಪಡಿಸಲಾದ ಯಾವುದೇ ಕಾರಣದ ಮೇಲೆ ತೆಗೆದುಹಾಕಲು ಪ್ರಸ್ತಾಪಿಸಿರುವಲ್ಲಿ, ಅವನ ವಿರುದ್ಧದ ಆರೋಪಗಳನ್ನು ಆತನಿಗೆ ತಿಳಿಸತಕ್ಕದ್ದು ಮತ್ತು ಆ ಆರೋಪಗಳ ಸಂಬಂಧವಾಗಿ ಅಹವಾಲನ್ನು ಹೇಳಿಕೊಳ್ಳಲು ಒಂದು ಅವಕಾಶವನ್ನು ನೀಡತಕ್ಕದ್ದು.

**5. ನ್ಯಾಯಾಧಿಕರಣದ ಅಧ್ಯಕ್ಷ ಮತ್ತು ಸದಸ್ಯನ ಪದಾವಧಿ.**–ಯಾವುದೇ ನ್ಯಾಯಾಲಯದ ಯಾವುದೇ ತೀರ್ಪು, ಆದೇಶ ಅಥವಾ ಡಿಕ್ರಿಯಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನಲ್ಲಿ ಏನೇ ಒಳಗೊಂಡಿದ್ದಾಗ್ಯೂ,–

(i) ನ್ಯಾಯಾಧಿಕರಣದ ಅಧ್ಯಕ್ಷನು ನಾಲ್ಕು ವರ್ಷಗಳ ಅವಧಿಯವರೆಗೆ ಅಥವಾ ಎಪ್ಪತ್ತು ವರ್ಷ ವಯಸ್ಸು ಆಗುವವರೆಗೆ, ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ, ಪದವನ್ನು ಹೊಂದಿರತಕ್ಕದ್ದು;

(ii) ನ್ಯಾಯಾಧಿಕರಣದ ಸದಸ್ಯನು ನಾಲ್ಕು ವರ್ಷಗಳ ಅವಧಿಯವರೆಗೆ ಅಥವಾ ಅರವತ್ತೇಳು ವರ್ಷ ವಯಸ್ಸು ಆಗುವವರೆಗೆ, ಯಾವುದು ಮೊದಲೋ ಅಲ್ಲಿಯವರೆಗೆ, ಪದವನ್ನು ಹೊಂದಿರತಕ್ಕದ್ದು:

ಪರಂತು, ಅಧ್ಯಕ್ಷ ಅಥವಾ ಸದಸ್ಯನು 26ನೇ ಮೇ, 2017 ಮತ್ತು ಅಧಿಸೂಚಿತ ದಿನಾಂಕದ ನಡುವೆ ನೇಮಕಗೊಂಡಿದ್ದಲ್ಲಿ ಮತ್ತು ಕೇಂದ್ರ ಸರ್ಕಾರವು ಹೊರಡಿಸಿದ ನೇಮಕಾತಿ ಆದೇಶದಲ್ಲಿ ನಿರ್ದಿಷ್ಟಪಡಿಸಲಾದ ಆತನ ಪದಾವಧಿ ಅಥವಾ ನಿವೃತ್ತಿ ವಯಸ್ಸು ಈ ಪ್ರಕರಣದಲ್ಲಿ ನಿರ್ದಿಷ್ಟಪಡಿಸಲಾದ ಪದಾವಧಿ ಅಥವಾ ನಿವೃತ್ತಿ ವಯಸ್ಸಿಗಿಂತ ಹೆಚ್ಚಿದ್ದಲ್ಲಿ, ಆಗ ಈ ಪ್ರಕರಣದಲ್ಲಿ ಏನೇ ಒಳಗೊಂಡಿದ್ದಾಗ್ಯೂ, ಸಂದರ್ಭಾನುಸಾರ ಅಧ್ಯಕ್ಷ ಅಥವಾ ಸದಸ್ಯನ ಪದಾವಧಿ ಅಥವಾ ನಿವೃತ್ತಿ ವಯಸ್ಸು ಅಥವಾ ಎರಡೂ, ಐದು ವರ್ಷಗಳ ಗರಿಷ್ಠ ಪದಾವಧಿಗೆ ಒಳಪಟ್ಟು, ಅವನ ನೇಮಕಾತಿ ಆದೇಶದಲ್ಲಿ ನಿರ್ದಿಷ್ಟಪಡಿಸಲಾದಂತೆ ಇರತಕ್ಕದ್ದು.

**6. ಪುನರ್ ನೇಮಕಾತಿಗಾಗಿ ಅರ್ಹತೆ.–** (1) ನ್ಯಾಯಾಧಿಕರಣದ ಅಧ್ಯಕ್ಷ ಮತ್ತು ಸದಸ್ಯನು ಈ ಅಧಿನಿಯಮದ ಉಪಬಂಧಗಳಿಗೆ ಅನುಸಾರವಾಗಿ ಪುನರ್ ನೇಮಕಾತಿಗೆ ಅರ್ಹನಾಗಿರತಕ್ಕದ್ದು:

ಪರಂತು, ಅಂಥ ಪುನರ್ ನೇಮಕಾತಿ ಮಾಡುವಾಗ, ಅಂಥ ವ್ಯಕ್ತಿ ಸಲ್ಲಿಸಿದ ಸೇವೆಗೆ ಆದ್ಯತೆ ನೀಡತಕ್ಕದ್ದು.

(2) ಎಲ್ಲಾ ಮರು ನೇಮಕಾತಿಗಳನ್ನು 3ನೇ ಪ್ರಕರಣದ (2)ನೇ ಉಪಪ್ರಕರಣದಲ್ಲಿ ಉಪಬಂಧಿಸಲಾದ ರೀತಿಯಲ್ಲಿಯೇ ಮಾಡತಕ್ಕದ್ದು.

**7. ಸಂಬಳ ಮತ್ತು ಭತ್ಯೆಗಳು.–** (1) ಯಾವುದೇ ನ್ಯಾಯಾಲಯದ ಯಾವುದೇ ತೀರ್ಪು, ಆದೇಶ ಅಥವಾ ಡಿಕ್ರಿಯಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನಲ್ಲಿ ಏನೇ ಒಳಗೊಂಡಿದ್ದಾಗ್ಯೂ ಮತ್ತು ಹಿಂದೆ ಹೇಳಿದ ಅಧಿಕಾರದ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ, ಕೇಂದ್ರ ಸರ್ಕಾರವು, ನ್ಯಾಯಾಧಿಕರಣದ ಅಧ್ಯಕ್‌ಷ ಮತ್ತು ಸದಸ್ಯನ ಸಂಬಳಕ್ಕೆ ಉಪಬಂಧ

ಕಲ್ಪಿಸುವುದಕ್ಕಾಗಿ ನಿಯಮಗಳನ್ನು ರಚಿಸಬಹುದು ಮತ್ತು ಕೇಂದ್ರ ಸರ್ಕಾರದ ಅದೇ ವೇತನದ ಹುದ್ದೆಯನ್ನು ಹೊಂದಿರುವ ಅಧಿಕಾರಿಗೆ ಕೊಡಮಾಡಬಹುದಾದಷ್ಟೇ ಭತ್ಯೆಗಳು ಮತ್ತು ಪ್ರಯೋಜನಗಳನ್ನು ಅವರಿಗೆ ಸಂದಾಯ ಮಾಡತಕ್ಕದ್ದು:

ಪರಂತು, ಅಧ್ಯಕ್ಷ ಅಥವಾ ಸದಸ್ಯನು ಬಾಡಿಗೆ ಮನೆ ಪಡೆದಿದ್ದರೆ, ಕೇಂದ್ರ ಸರ್ಕಾರದ ಅದೇ ವೇತನದ ಹುದ್ದೆಯನ್ನು ಹೊಂದಿರುವ ಅಧಿಕಾರಿಗೆ ಕೊಡಮಾಡಬಹುದಾದಕ್ಕಿಂತ ಹೆಚ್ಚಿನ ಮನೆ ಬಾಡಿಗೆ ಭತ್ಯೆಯನ್ನು, ನಿಯಮಗಳ ಮೂಲಕ ಉಪಬಂಧಿಸಬಹುದಾದಂಥ ಮಿತಿಗಳು ಮತ್ತು ಷರತ್ತುಗಳಿಗೆ ಒಳಪಟ್ಟು, ಮರು ಸಂದಾಯ ಮಾಡಬಹುದು.

(2) ನ್ಯಾಯಾಧಿಕರಣದ ಅಧ್ಯಕ್ಷ ಅಥವಾ ಸದಸ್ಯನ ಸಂಬಳ ಮತ್ತು ಭತ್ಯೆಗಳಾಗಲೀ ಇಲ್ಲವೇ ಇತರ ಸೇವಾ ನಿಬಂಧನೆಗಳು ಮತ್ತು ಷರತ್ತುಗಳಾಗಲೀ ಆತನ ನೇಮಕಾತಿಯ ನಂತರ ಅವನಿಗೆ ಅನನುಕೂಲವಾಗುವ ಹಾಗೆ ವ್ಯತ್ಯಾಸಗೊಳ್ಳಬಾರದು.

## ಅಧ್ಯಾಯ III

## ಕೈಗಾರಿಕಾ ವಿವಾದಗಳ ಅಧಿನಿಯಮ, 1947ಕ್ಕೆ ತಿದ್ದುಪಡಿ

**8. 1947ರ 14ನೇ ಅಧಿನಿಯಮದ ತಿದ್ದುಪಡಿ.–** ಕೈಗಾರಿಕಾ ವಿವಾದಗಳ ಅಧಿನಿಯಮ, 1947ರ 7ಡಿ ಪ್ರಕರಣದಲ್ಲಿ, "ಹಣಕಾಸು ಅಧಿನಿಯಮ, 2017 (2017ರ 7)ರ VIನೇ ಅಧ್ಯಾಯದ XIVನೇ ಭಾಗವು, ಆ ಅಧಿನಿಯಮದ 184ನೇ ಪ್ರಕರಣದ ಉಪಬಂಧಗಳಿಂದ ನಿಯಂತ್ರಿಸಲ್ಪಡತಕ್ಕದ್ದು" ಎಂಬ ಪದಗಳು ಮತ್ತು ಅಂಕಿಗಳ ಬದಲಿಗೆ, "ನ್ಯಾಯಾಧಿಕರಣಗಳ ಸುಧಾರಣಾ ಅಧಿನಿಯಮ, 2021, ಸದರಿ ಅಧಿನಿಯಮದ IIನೇ ಅಧ್ಯಾಯದ ಉಪಬಂಧಗಳಿಂದ ನಿಯಂತ್ರಿಸಲ್ಪಡತಕ್ಕದ್ದು" ಎಂಬ ಪದಗಳು ಮತ್ತು ಅಂಕಿಗಳನ್ನು ಪ್ರತ್ಯಾಯೋಜಿಸತಕ್ಕದ್ದು.

## ಅಧ್ಯಾಯ IV

## ಚಲನಚಿತ್ರ ಅಧಿನಿಯಮ, 1952ಕ್ಕೆ ತಿದ್ದುಪಡಿಗಳು

**9. 1952ರ 37ನೇ ಅಧಿನಿಯಮದ ತಿದ್ದುಪಡಿ.–** ಚಲನಚಿತ್ರ ಅಧಿನಿಯಮ, 1952ರಲ್ಲಿ,–

(ಎ) 2ನೇ ಪ್ರಕರಣದ (ಹೆಚ್) ಖಂಡವನ್ನು ಬಿಟ್ಟುಬಿಡತಕ್ಕದ್ದು;

(ಬಿ) 5ಸಿ ಪ್ರಕರಣದಲ್ಲಿ,–

(i) "ನ್ಯಾಯಾಧಿಕರಣ" ಎಂಬ ಪದವು ಬರುವ ಎರಡೂ ಕಡೆಗಳಲ್ಲಿ, ಆ ಪದದ ಬದಲಿಗೆ "ಉಚ್ಚ ನ್ಯಾಯಾಲಯ" ಎಂಬ ಪದಗಳನ್ನು ಪ್ರತ್ಯಾಯೋಜಿಸತಕ್ಕದ್ದು;

(ii) (2)ನೇ ಉಪಪ್ರಕರಣವನ್ನು ಬಿಟ್ಟುಬಿಡತಕ್ಕದ್ದು;

(ಸಿ) 5ಡಿ ಮತ್ತು 5ಡಿಡಿ ಪ್ರಕರಣವನ್ನು ಬಿಟ್ಟುಬಿಡತಕ್ಕದ್ದು;

(ಡಿ) 6ನೇ ಪ್ರಕರಣದಲ್ಲಿ, "ಅಥವಾ ಸಂದರ್ಭಾನುಸಾರವಾಗಿ, ನ್ಯಾಯಾಧಿಕರಣದಿಂದ ನಿರ್ಧರಿಸಲ್ಪಡುತ್ತದೆ (ಆದರೆ ನ್ಯಾಯಾಧಿಕರಣದ ಮುಂದೆ ಬಾಕಿಯಿರುವ ಯಾವುದೇ ವಿಷಯಕ್ಕೆ ಸಂಬಂಧಪಟ್ಟ ಯಾವುದೇ ವ್ಯವಹರಣೆಯನ್ನು ಒಳಗೊಳ್ಳುವುದಿಲ್ಲ)" ಎಂಬ ಪದಗಳು ಮತ್ತು ಆವರಣಗಳನ್ನು ಬಿಟ್ಟುಬಿಡತಕ್ಕದ್ದು;

(ಇ) 7ಎ ಮತ್ತು 7ಸಿ ಪ್ರಕರಣಗಳಲ್ಲಿ, "ನ್ಯಾಯಾಧಿಕರಣ" ಎಂಬ ಪದವು ಬರುವ ಕಡೆಗಳಲ್ಲಿ, ಆ ಪದದ ಬದಲಿಗೆ, "ಉಚ್ಚ ನ್ಯಾಯಾಲಯ" ಎಂಬ ಪದಗಳನ್ನು ಪ್ರತ್ಯಾಯೋಜಿಸತಕ್ಕದ್ದು;

(ಎಫ್) 7ಡಿ, 7ಇ ಮತ್ತು 7ಎಫ್ ಪ್ರಕರಣಗಳಲ್ಲಿ, "ನ್ಯಾಯಾಧಿಕರಣ" ಎಂಬ ಪದವು ಬರುವ ಕಡೆಗಳಲ್ಲಿ, ಆ ಪದವನ್ನು ಬಿಟ್ಟುಬಿಡತಕ್ಕದ್ದು;

(ಜಿ) 8ನೇ ಪ್ರಕರಣದಲ್ಲಿನ (2)ನೇ ಉಪಪ್ರಕರಣದ (ಹೆಚ್), (ಐ), (ಜೆ) ಮತ್ತು (ಕೆ) ಖಂಡಗಳನ್ನು ಬಿಟ್ಟುಬಿಡತಕ್ಕದ್ದು.

## ಅಧ್ಯಾಯ V

## ಕೃತಿಸ್ವಾಮ್ಯ ಅಧಿನಿಯಮ, 1957ಕ್ಕೆ ತಿದ್ದುಪಡಿಗಳು

**10. 1957ರ 14ನೇ ಅಧಿನಿಯಮದ ತಿದ್ದುಪಡಿ.–** ಕೃತಿಸ್ವಾಮ್ಯ ಅಧಿನಿಯಮ, 1957ರಲ್ಲಿ,–

(ಎ) 2ನೇ ಪ್ರಕರಣದಲ್ಲಿ,–

(i) ಖಂಡ (ಎಎ)ನ್ನು ಬಿಟ್ಟುಬಿಡತಕ್ಕದ್ದು;

(ii) ಖಂಡ (ಎಫ್‌ಎ)ನ್ನು ಖಂಡ (ಎಫ್‌ಎಎ) ವೆಂಬುದಾಗಿ ಮರು ಅಕ್ಷರಿಸತಕ್ಕದ್ದು ಮತ್ತು ಹಾಗೆ ಮರು ಅಕ್ಷರಿಸಲಾದ (ಎಫ್‌ಎಎ) ಖಂಡಕ್ಕಿಂತ ಮೊದಲು ಈ ಮುಂದಿನ ಖಂಡವನ್ನು ಸೇರಿಸತಕ್ಕದ್ದು, ಎಂದರೆ:–

"(ಎಫ್‌ಎ) ಯಾವುದೇ ರಾಜ್ಯದ ಉದ್ದೇಶಗಳಿಗಾಗಿ "ವಾಣಿಜ್ಯ ನ್ಯಾಯಾಲಯ" ಎಂದರೆ, ವಾಣಿಜ್ಯ ನ್ಯಾಯಾಲಯಗಳ ಅಧಿನಿಯಮ, 2015 (2016ರ 4)ರ 3ನೇ ಪ್ರಕರಣದ ಮೇರೆಗೆ ರಚಿತವಾದ ವಾಣಿಜ್ಯ ನ್ಯಾಯಾಲಯ ಅಥವಾ 4ನೇ ಪ್ರಕರಣದ ಮೇರೆಗೆ ರಚಿತವಾದ ಉಚ್ಚ ನ್ಯಾಯಾಲಯದ ವಾಣಿಜ್ಯ ವಿಭಾಗ;"

(iii) ಖಂಡ (ಯು)ನ ಬದಲಿಗೆ, ಈ ಮುಂದಿನ ಖಂಡವನ್ನು ಪ್ರತ್ಯಾಯೋಜಿಸತಕ್ಕದ್ದು, ಎಂದರೆ:–

"(ಯು) "ನಿಯಮಿಸಲಾದುದು" ಎಂದರೆ:–

(i) ಉಚ್ಚ ನ್ಯಾಯಾಲಯದ ಮುಂದಿರುವ ವ್ಯವಹರಣೆಗಳ ಸಂಬಂಧದಲ್ಲಿ, ಉಚ್ಚ ನ್ಯಾಯಾಲಯ ಮಾಡಿದ ನಿಯಮಗಳಿಂದ ನಿಯಮಿಸಲಾದುದು; ಮತ್ತು

(ii) ಇತರ ಸಂದರ್ಭಗಳಲ್ಲಿ, ಈ ಅಧಿನಿಯಮದ ಮೇರೆಗೆ ರಚಿಸಿದ ನಿಯಮಗಳ ಮೂಲಕ ನಿಯಮಿಸಲಾದುದು;"

(ಬಿ) 6ನೇ ಪ್ರಕರಣದಲ್ಲಿ,–

(i) "ಅಪೀಲು ಮಂಡಳಿ" ಎಂಬ ಪದಗಳು ಬರುವ ಕಡೆಗಳಲ್ಲಿ, ಆ ಪದಗಳ ಬದಲಿಗೆ, "ವಾಣಿಜ್ಯ ನ್ಯಾಯಾಲಯ" ಎಂಬ ಪದಗಳನ್ನು ಪ್ರತ್ಯಾಯೋಜಿಸತಕ್ಕದ್ದು;

(ii) "ಆ ಬಗ್ಗೆ ನಿರ್ಣಯವು ಅಂತಿಮವಾಗಿರತಕ್ಕಂಥ 11ನೇ ಪ್ರಕರಣದ ಮೇರೆಗೆ ರಚಿತವಾದ" ಎಂಬ ಪದಗಳು ಮತ್ತು ಅಂಕಿಗಳನ್ನು ಬಿಟ್ಟುಬಿಡತಕ್ಕದ್ದು;

(ಸಿ) ಅಧ್ಯಾಯ IIರಲ್ಲಿ, ಅಧ್ಯಾಯದ ಶೀರ್ಷಿಕೆಯಲ್ಲಿ, "ಮತ್ತು ಅಪೀಲು ಮಂಡಳಿ" ಎಂಬ ಪದಗಳನ್ನು ಬಿಟ್ಟುಬಿಡತಕ್ಕದ್ದು;

(ಡಿ) 11ನೇ ಮತ್ತು 12ನೇ ಪ್ರಕರಣಗಳನ್ನು ಬಿಟ್ಟುಬಿಡತಕ್ಕದ್ದು;

(ಇ) 19ಎ, 23, 31, 31ಎ, 31ಬಿ, 31ಸಿ, 31ಡಿ, 32, 32ಎ ಮತ್ತು 33ಎ ಪ್ರಕರಣಗಳಲ್ಲಿನ, "ಅಪೀಲು ಮಂಡಳಿ" ಎಂಬ ಪದಗಳು ಬರುವ ಕಡೆಗಳಲ್ಲಿ, ಆ ಪದಗಳ ಬದಲಿಗೆ "ವಾಣಿಜ್ಯ ನ್ಯಾಯಾಲಯ" ಎಂಬ ಪದಗಳನ್ನು ಪ್ರತ್ಯಾಯೋಜಿಸತಕ್ಕದ್ದು;

(ಎಫ್) 50ನೇ ಪ್ರಕರಣದಲ್ಲಿ, "ಅಪೀಲು ಮಂಡಳಿ" ಎಂಬ ಪದಗಳು ಬರುವ ಕಡೆಗಳಲೆಲ್ಲಾ "ಉಚ್ಚ ನ್ಯಾಯಾಲಯ" ಎಂಬ ಪದಗಳನ್ನು ಪ್ರತ್ಯಾಯೋಜಿಸತಕ್ಕದ್ದು;

(ಜಿ) 53ಎ ಪ್ರಕರಣದಲ್ಲಿ,–

(i) "ಅಪೀಲು ಮಂಡಳಿ" ಎಂಬ ಪದಗಳು ಬರುವ ಕಡೆಗಳೆಲ್ಲಾ "ವಾಣಿಜ್ಯ ನ್ಯಾಯಾಲಯ" ಎಂಬ ಪದಗಳನ್ನು ಪ್ರತ್ಯಾಯೋಜಿಸತಕ್ಕದ್ದು;

(ii) (2)ನೇ ಉಪಪ್ರಕರಣದಲ್ಲಿ, "ಮತ್ತು ಈ ಬಗ್ಗೆ ಅಪೀಲು ಮಂಡಳಿಯ ತೀರ್ಮಾನ ಅಂತಿಮವಾಗಿರತಕ್ಕದ್ದು" ಎಂಬ ಪದಗಳನ್ನು ಬಿಟ್ಟುಬಿಡತಕ್ಕದ್ದು;

(ಹೆಚ್) 54ನೇ ಪ್ರಕರಣದಲ್ಲಿ, "ಅಪೀಲು ಮಂಡಳಿ" ಎಂಬ ಪದಗಳ ಬದಲಿಗೆ, "ಉಚ್ಚ ನ್ಯಾಯಾಲಯ" ಎಂಬ ಪದಗಳನ್ನು ಪ್ರತ್ಯಾಯೋಜಿಸತಕ್ಕದ್ದು;

(ಐ) 72ನೇ ಪ್ರಕರಣದ ಬದಲಾಗಿ ಈ ಮುಂದಿನ ಪ್ರಕರಣವನ್ನು ಪ್ರತ್ಯಾಯೋಜಿಸತಕ್ಕದ್ದು, ಎಂದರೆ:–

"**72. ಕೃತಿಸ್ವಾಮ್ಯ ರಿಜಿಸ್ಟ್ರಾರನ ಆದೇಶಗಳ ವಿರುದ್ಧ ಅಪೀಲುಗಳು.–** (1) ಕೃತಿಸ್ವಾಮ್ಯಗಳ ರಿಜಿಸ್ಟ್ರಾರನ ಯಾವುದೇ ಅಂತಿಮ ತೀರ್ಮಾನ ಅಥವಾ ಆದೇಶದಿಂದ ಬಾಧಿತನಾದ ಯಾರೇ ವ್ಯಕ್ತಿಯು, ಆ ಆದೇಶ ಅಥವಾ ತೀರ್ಮಾನದ ದಿನಾಂಕದಿಂದ ಮೂರು ತಿಂಗಳ ಒಳಗಾಗಿ ಉಚ್ಚ ನ್ಯಾಯಾಲಯಕ್ಕೆ ಅಪೀಲು ಸಲ್ಲಿಸತಕ್ಕದ್ದು.

(2) ಅಂಥ ಪ್ರತಿಯೊಂದು ಅಪೀಲನ್ನು ಉಚ್ಚ ನ್ಯಾಯಾಲಯದ ಒಬ್ಬನೇ ನ್ಯಾಯಾಧೀಶನು ವಿಚಾರಣೆ ಮಾಡತಕ್ಕದ್ದು:

ಪರಂತು, ಅಂಥ ಯಾರೇ ನ್ಯಾಯಾಧೀಶನು, ತಾನು ಸೂಕ್ತವೆಂದು ಭಾವಿಸಿದರೆ, ವ್ಯವಹರಣೆಯ ಯಾವುದೇ ಹಂತದಲ್ಲಿ ಅಪೀಲನ್ನು ಉಚ್ಚ ನ್ಯಾಯಾಲಯದ ಪೀಠಕ್ಕೆ ವರ್ಗಾಯಿಸತಕ್ಕದ್ದು.

(3) ಒಬ್ಬನೇ ನ್ಯಾಯಾಧೀಶನು ಅಪೀಲನ್ನು ವಿಚಾರಣೆ ಮಾಡಿರುವಲ್ಲಿ, ಒಬ್ಬನೇ ನ್ಯಾಯಾಧೀಶನ ತೀರ್ಮಾನ ಅಥವಾ ಆದೇಶದ ದಿನಾಂಕದಿಂದ ಮೂರು ತಿಂಗಳ ಒಳಗಾಗಿ, ಉಚ್ಚ ನ್ಯಾಯಾಲಯದ ಪೀಠಕ್ಕೆ ಅಪೀಲನ್ನು ಸಲ್ಲಿಸತಕ್ಕದ್ದು.

(4) ಈ ಪ್ರಕರಣದ ಮೇರೆಗೆ ಅಪೀಲಿಗಾಗಿ ಉಪಬಂಧಿಸಿದ ಮೂರು ತಿಂಗಳ ಅವಧಿಯನ್ನು ಲೆಕ್ಕಹಾಕುವಲ್ಲಿ, ಯಾವ ಆದೇಶ ಅಥವಾ ತೀರ್ಮಾನದ ವಿರುದ್ಧ ಅಪೀಲು ಮಾಡಿಕೊಳ್ಳಲಾಗಿದೆಯೋ ಆ ಆದೇಶದ ಅಥವಾ ತೀರ್ಮಾನದ ದಾಖಲೆಯ ಪ್ರಮಾಣಿತ ಪ್ರತಿ ನೀಡುವಲ್ಲಿ ತೆಗೆದುಕೊಳ್ಳಲಾದ ಸಮಯವನ್ನು ಹೊರತುಪಡಿಸತಕ್ಕದ್ದು.";

(ಜೆ) 74ನೇ ಮತ್ತು 75ನೇ ಪ್ರಕರಣಗಳಲ್ಲಿ, "ಮತ್ತು ಅಪೀಲು ಮಂಡಳಿ" ಎಂಬ ಪದಗಳು ಕಂಡುಬರುವ ಕಡೆಗಳಲೆಲ್ಲಾ, ಆ ಪದಗಳನ್ನು ಬಿಟ್ಟುಬಿಡತಕ್ಕದ್ದು;

(ಕೆ) 77ನೇ ಪ್ರಕರಣದಲ್ಲಿ, "ಮತ್ತು ಅಪೀಲು ಮಂಡಳಿಯ ಪ್ರತಿಯೊಬ್ಬ ಸದಸ್ಯ" ಎಂಬ ಪದಗಳನ್ನು ಬಿಟ್ಟುಬಿಡತಕ್ಕದ್ದು;

(ಎಲ್) 78ನೇ ಪ್ರಕರಣದ (2)ನೇ ಉಪಪ್ರಕರಣದಲ್ಲಿ,–

(i) ಖಂಡ (ಸಿಎ) ಮತ್ತು (ಸಿಸಿಬಿ) ಗಳನ್ನು ಬಿಟ್ಟುಬಿಡತಕ್ಕದ್ದು;

(ii) ಖಂಡ (ಎಫ್) ನಲ್ಲಿ, "ಮತ್ತು ಅಪೀಲು ಮಂಡಳಿ" ಎಂಬ ಪದಗಳನ್ನು ಬಿಟ್ಟುಬಿಡತಕ್ಕದ್ದು.

## ಅಧ್ಯಾಯ VI

### ಆದಾಯ ತೆರಿಗೆ ಅಧಿನಿಯಮ, 1961ಕ್ಕೆ ತಿದ್ದುಪಡಿ

**11. 1961ರ 43ನೇ ಅಧಿನಿಯಮದ ತಿದ್ದುಪಡಿ.–** ಆದಾಯ ತೆರಿಗೆ ಅಧಿನಿಯಮ, 1961ರ 252ಎ ಪ್ರಕರಣದಲ್ಲಿ, "ಹಣಕಾಸು ಅಧಿನಿಯಮ, 2017 (2017ರ 7)ರ VIನೇ ಅಧ್ಯಾಯದ XIVನೇ ಭಾಗವು, ಆ ಅಧಿನಿಯಮದ 184ನೇ ಪ್ರಕರಣದ ಉಪಬಂಧಗಳಿಂದ ನಿಯಂತ್ರಿಸಲ್ಪಡತಕ್ಕದ್ದು" ಎಂಬ ಪದಗಳು ಮತ್ತು ಅಂಕಿಗಳ ಬದಲಿಗೆ, "ನ್ಯಾಯಾಧಿಕರಣಗಳ ಸುಧಾರಣಾ ಅಧಿನಿಯಮ, 2021, ಇದು, ಸದರಿ ಅಧಿನಿಯಮದ–IIನೇ ಅಧ್ಯಾಯದ ಉಪಬಂಧಗಳಿಂದ ನಿಯಂತ್ರಿಸಲ್ಪಡತಕ್ಕದ್ದು" ಎಂಬ ಪದಗಳು ಮತ್ತು ಅಂಕಿಗಳನ್ನು ಪ್ರತ್ಯಾಯೋಜಿಸತಕ್ಕದ್ದು.

## ಅಧ್ಯಾಯ VII

### ಸೀಮಾಸುಂಕ ಅಧಿನಿಯಮ, 1962ಕ್ಕೆ ತಿದ್ದುಪಡಿ

**12. 1962ರ 52ನೇ ಅಧಿನಿಯಮದ ತಿದ್ದುಪಡಿ.–** ಸೀಮಾಸುಂಕ ಅಧಿನಿಯಮ, 1962ರಲ್ಲಿ,–

(ಎ) 28ಇ ಪ್ರಕರಣದಲ್ಲಿನ, ಖಂಡ (ಬಿಎ), (ಎಫ್) ಮತ್ತು (ಜಿ)ಗಳನ್ನು ಬಿಟ್ಟುಬಿಡತಕ್ಕದ್ದು;

(ಬಿ) 28ಇಎ ಪ್ರಕರಣದ, ಪರಂತುಕವನ್ನು ಬಿಟ್ಟುಬಿಡತಕ್ಕದ್ದು;

(ಸಿ) 28ಎಫ್ ಪ್ರಕರಣದ (1)ನೇ ಉಪಪ್ರಕರಣವನ್ನು ಬಿಟ್ಟುಬಿಡತಕ್ಕದ್ದು;

(ಡಿ) 28ಕೆಎ ಪ್ರಕರಣದಲ್ಲಿ,–

(i) (1)ನೇ ಉಪಪ್ರಕರಣದಲ್ಲಿ "ಅಪೀಲು ಪ್ರಾಧಿಕಾರ" ಎಂಬ ಪದಗಳು ಬರುವ ಎರಡೂ ಕಡೆಗಳಲ್ಲಿ, ಅವುಗಳ ಬದಲಿಗೆ, "ಉಚ್ಚ ನ್ಯಾಯಾಲಯ" ಎಂಬ ಪದಗಳನ್ನು ಪ್ರತ್ಯಾಯೋಜಿಸತಕ್ಕದ್ದು;

(ii) (2)ನೇ ಉಪಪ್ರಕರಣವನ್ನು ಬಿಟ್ಟುಬಿಡತಕ್ಕದ್ದು;

(ಇ) 28ಎಲ್ ಪ್ರಕರಣದಲ್ಲಿ, "ಅಥವಾ ಅಪೀಲು ಪ್ರಾಧಿಕಾರ" ಎಂಬ ಪದಗಳು ಬರುವ ಕಡೆಗಳಲ್ಲಿ, ಅವುಗಳನ್ನು ಬಿಟ್ಟುಬಿಡತಕ್ಕದ್ದು;

(ಎಫ್) 28ಎಂ ಪ್ರಕರಣದಲ್ಲಿ,–

(i) ಅಂಚಿನ ಶೀರ್ಷಿಕೆಯಲ್ಲಿ, "ಮತ್ತು ಅಪೀಲು ಪ್ರಾಧಿಕಾರ" ಎಂಬ ಪದಗಳನ್ನು ಬಿಟ್ಟುಬಿಡತಕ್ಕದ್ದು;

(ii) (2)ನೇ ಉಪಪ್ರಕರಣವನ್ನು ಬಿಟ್ಟುಬಿಡತಕ್ಕದ್ದು;

(ಜಿ) 129ನೇ ಪ್ರಕರಣದ (7)ನೇ ಉಪಪ್ರಕರಣದಲ್ಲಿ, "ಹಣಕಾಸು ಅಧಿನಿಯಮ, 2017ರ (2017ರ 7) VIನೇ ಅಧ್ಯಾಯದ XVIನೇ ಭಾಗವು, ಆ ಅಧಿನಿಯಮದ 184ನೇ ಪ್ರಕರಣದ ಉಪಬಂಧಗಳಿಂದ ನಿಯಂತ್ರಿಸಲ್ಪಡತಕ್ಕದ್ದು" ಎಂಬ ಪದಗಳು ಮತ್ತು ಅಂಕಿಗಳ ಬದಲಿಗೆ, "ನ್ಯಾಯಾಧಿಕರಣಗಳ ಸುಧಾರಣಾ ಅಧಿನಿಯಮ, 2021, ಇದು, ಸದರಿ ಅಧಿನಿಯಮದ IIನೇ ಅಧ್ಯಾಯದ ಉಪಬಂಧಗಳಿಂದ ನಿಯಂತ್ರಿಸಲ್ಪಡತಕ್ಕದ್ದು" ಎಂಬ ಪದಗಳು ಮತ್ತು ಅಂಕಿಗಳನ್ನು ಪ್ರತ್ಯಾಯೋಜಿಸತಕ್ಕದ್ದು.

## ಅಧ್ಯಾಯ VIII

### ಪೇಟೆಂಟ್ ಅಧಿನಿಯಮ, 1970ಕ್ಕೆ ತಿದ್ದುಪಡಿ

**13. 1970ರ 39ನೇ ಅಧಿನಿಯಮದ ತಿದ್ದುಪಡಿ.–** ಪೇಟೆಂಟ್ ಅಧಿನಿಯಮ, 1970ರಲ್ಲಿ,–

(ಎ) 2ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿ,–

(i) (ಎ) ಖಂಡವನ್ನು ಬಿಟ್ಟುಬಿಡತಕ್ಕದ್ದು;

(ii) (ಯು) ಖಂಡದಲ್ಲಿನ, (ಬಿ) ಉಪಖಂಡವನ್ನು ಬಿಟ್ಟುಬಿಡತಕ್ಕದ್ದು;

(ಬಿ) 52ನೇ ಪ್ರಕರಣದಲ್ಲಿನ, "ಅಪೀಲು ಮಂಡಳಿ ಅಥವಾ" ಎಂಬ ಪದಗಳು ಬರುವ ಕಡೆಗಳೆಲ್ಲಾ, ಅವುಗಳನ್ನು ಬಿಟ್ಟುಬಿಡತಕ್ಕದ್ದು;

(ಸಿ) 58ನೇ ಪ್ರಕರಣದಲ್ಲಿ,–

(i) "ಅಪೀಲು ಮಂಡಳಿ ಅಥವಾ" ಎಂಬ ಪದಗಳು ಬರುವ ಕಡೆಗಳೆಲ್ಲಾ, ಅವುಗಳನ್ನು ಬಿಟ್ಟುಬಿಡತಕ್ಕದ್ದು;

(ii) "ಸಂದರ್ಭಾನುಸಾರವಾಗಿ" ಎಂಬ ಪದವನ್ನು ಬಿಟ್ಟುಬಿಡತಕ್ಕದ್ದು;

(ಡಿ) 59ನೇ ಪ್ರಕರಣದಲ್ಲಿ, "ಅಪೀಲು ಮಂಡಳಿ ಅಥವಾ" ಎಂಬ ಪದಗಳನ್ನು ಬಿಟ್ಟುಬಿಡತಕ್ಕದ್ದು;

(ಇ) 64ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿ, "ಅಪೀಲು ಮಂಡಳಿಯಿಂದ" ಎಂಬ ಪದಗಳನ್ನು ಬಿಟ್ಟುಬಿಡತಕ್ಕದ್ದು;

(ಎಫ್) 71ನೇ ಪ್ರಕರಣದಲ್ಲಿ, "ಅಪೀಲು ಮಂಡಳಿ" ಮತ್ತು "ಮಂಡಳಿ" ಎಂಬ ಪದಗಳು ಬರುವಲೆಲ್ಲ "ಉಚ್ಚ ನ್ಯಾಯಾಲಯ" ಎಂಬ ಪದಗಳನ್ನು ಪ್ರತ್ಯಾಯೋಜಿಸತಕ್ಕದ್ದು;

(ಜಿ) 76ನೇ ಪ್ರಕರಣದಲ್ಲಿ, "ಅಥವಾ ಅಪೀಲು ಮಂಡಳಿ" ಎಂಬ ಪದಗಳನ್ನು ಬಿಟ್ಟುಬಿಡತಕ್ಕದ್ದು;

(ಹೆಚ್) 113ನೇ ಪ್ರಕರಣದ,–

(i) (1)ನೇ ಉಪಪ್ರಕರಣದಲ್ಲಿ,–

(ಎ) "ಅಪೀಲು ಮಂಡಳಿ ಅಥವಾ" ಎಂಬ ಪದಗಳು ಬರುವ ಕಡೆಗಳಲೆಲ್ಲ, ಅವುಗಳನ್ನು ಬಿಟ್ಟುಬಿಡತಕ್ಕದ್ದು;

(ಬಿ) "ಸಂದರ್ಭಾನುಸಾರವಾಗಿ" ಎಂಬ ಪದಗಳನ್ನು ಬಿಟ್ಟುಬಿಡತಕ್ಕದ್ದು;

(ii) (3)ನೇ ಉಪಪ್ರಕರಣದಲ್ಲಿ, "ಅಥವಾ ಅಪೀಲು ಮಂಡಳಿ" ಎಂಬ ಪದಗಳನ್ನು ಬಿಟ್ಟುಬಿಡತಕ್ಕದ್ದು;

(ಐ) XIXನೇ ಅಧ್ಯಾಯದಲ್ಲಿ, ಅಧ್ಯಾಯ ಶೀರ್ಷಿಕೆಯ ಬದಲಿಗೆ, "ಅಪೀಲುಗಳು" ಎಂಬ ಅಧ್ಯಾಯ ಶೀರ್ಷಿಕೆಯನ್ನು ಪ್ರತ್ಯಾಯೋಜಿಸತಕ್ಕದ್ದು;

(ಜೆ) 116ನೇ ಮತ್ತು 117ನೇ ಪ್ರಕರಣಗಳನ್ನು ಬಿಟ್ಟುಬಿಡತಕ್ಕದ್ದು;

(ಕೆ) 117ಎ ಪ್ರಕರಣದಲ್ಲಿನ, "ಅಪೀಲು ಮಂಡಳಿ" ಎಂಬ ಪದಗಳು ಬರುವ ಕಡೆಗಳಲ್ಲಿ, ಅವುಗಳ ಬದಲಿಗೆ, "ಉಚ್ಚ ನ್ಯಾಯಾಲಯ" ಎಂಬ ಪದಗಳನ್ನು ಪ್ರತ್ಯಾಯೋಜಿಸತಕ್ಕದ್ದು;

(ಎಲ್) 117ಬಿ, 117ಸಿ, 117ಡಿ ಪ್ರಕರಣಗಳನ್ನು ಬಿಟ್ಟುಬಿಡತಕ್ಕದ್ದು;

(ಎಂ) 117ಇ ಪ್ರಕರಣದಲ್ಲಿನ, "ಅಪೀಲು ಮಂಡಳಿ" ಎಂಬ ಪದಗಳು ಬರುವ ಕಡೆಗಳಲ್ಲಿ, ಅವುಗಳ ಬದಲಿಗೆ, "ಉಚ್ಚ ನ್ಯಾಯಾಲಯ" ಎಂಬ ಪದಗಳನ್ನು ಪ್ರತ್ಯಾಯೋಜಿಸತಕ್ಕದ್ದು;

(ಎನ್) 117ಎಫ್, 117ಜಿ, 117ಹೆಚ್ ಪ್ರಕರಣಗಳನ್ನು ಬಿಟ್ಟುಬಿಡತಕ್ಕದ್ದು;

(ಒ) 151ನೇ ಪ್ರಕರಣದ,–

(i) (1)ನೇ ಉಪಪ್ರಕರಣದಲ್ಲಿ, "ಅಪೀಲು ಮಂಡಳಿ ಅಥವಾ" ಎಂಬ ಪದಗಳು ಬರುವ ಎರಡೂ ಕಡೆಗಳಲ್ಲಿ, ಅವುಗಳನ್ನು ಬಿಟ್ಟುಬಿಡತಕ್ಕದ್ದು;

(ii) (3)ನೇ ಉಪಪ್ರಕರಣದಲ್ಲಿ, "ಸಂದರ್ಭಾನುಸಾರ, ಅಪೀಲು ಮಂಡಳಿ ಅಥವಾ ನ್ಯಾಯಾಲಯಗಳು" ಎಂಬ ಪದಗಳ ಬದಲಿಗೆ, "ನ್ಯಾಯಾಲಯಗಳು" ಎಂಬ ಪದವನ್ನು ಪ್ರತ್ಯಾಯೋಜಿಸತಕ್ಕದ್ದು;

(ಪಿ) 159ನೇ ಪ್ರಕರಣದ (2)ನೇ ಉಪಪ್ರಕರಣದಲ್ಲಿನ, (xiiಎ), (xiiಬಿ) ಮತ್ತು (xiiಸಿ) ಖಂಡಗಳನ್ನು ಬಿಟ್ಟುಬಿಡತಕ್ಕದ್ದು;

## ಅಧ್ಯಾಯ IX

## ಕಳ್ಳಸಾಗಣೆದಾರರ ಮತ್ತು ವಿದೇಶಿ ವಿನಿಮಯದಲ್ಲಿ ಕೈಚಳಕ ತೋರಿಸುವವರ (ಸ್ವತ್ತಿನ ಮುಟ್ಟುಗೋಲು) ಅಧಿನಿಯಮ, 1976ಕ್ಕೆ ತಿದ್ದುಪಡಿ

**14. 1976ರ 13ನೇ ಅಧಿನಿಯಮದ ತಿದ್ದುಪಡಿ.–** ಕಳ್ಳಸಾಗಣೆದಾರರ ಮತ್ತು ವಿದೇಶಿ ವಿನಿಮಯದಲ್ಲಿ ಕೈಚಳಕ ತೋರಿಸುವವರ (ಸ್ವತ್ತಿನ ಮುಟ್ಟುಗೋಲು) ಅಧಿನಿಯಮ, 1976ರ 12ಎ ಪ್ರಕರಣದಲ್ಲಿ, "ಹಣಕಾಸು ಅಧಿನಿಯಮ, 2017 (2017ರ 7)ರ VIನೇ ಅಧ್ಯಾಯದ XIVನೇ ಭಾಗವು, ಆ ಅಧಿನಿಯಮದ 184ನೇ ಪ್ರಕರಣದ ಉಪಬಂಧಗಳಿಂದ ನಿಯಂತ್ರಿಸಲ್ಪಡತಕ್ಕದ್ದು" ಎಂಬ ಪದಗಳು ಮತ್ತು ಅಂಕಿಗಳ ಬದಲಿಗೆ, "ನ್ಯಾಯಾಧಿಕರಣಗಳ ಸುಧಾರಣಾ ಅಧಿನಿಯಮ, 2021, ಇದು, ಸದರಿ ಅಧಿನಿಯಮದ IIನೇ ಅಧ್ಯಾಯದ ಉಪಬಂಧಗಳಿಂದ ನಿಯಂತ್ರಿಸಲ್ಪಡತಕ್ಕದ್ದು" ಎಂಬ ಪದಗಳು ಮತ್ತು ಅಂಕಿಗಳನ್ನು ಪ್ರತ್ಯಾಯೋಜಿಸತಕ್ಕದ್ದು.

## ಅಧ್ಯಾಯ X

### ಆಡಳಿತ ನ್ಯಾಯಾಧಿಕರಣಗಳ ಅಧಿನಿಯಮ, 1985ಕ್ಕೆ ತಿದ್ದುಪಡಿ

**15. 1985ರ 13ನೇ ಅಧಿನಿಯಮದ ತಿದ್ದುಪಡಿ.–** ಆಡಳಿತ ನ್ಯಾಯಾಧಿಕರಣಗಳ ಅಧಿನಿಯಮ, 1985ರ 10ಬಿ ಪ್ರಕರಣದಲ್ಲಿ, "ಹಣಕಾಸು ಅಧಿನಿಯಮ, 2017 (2017ರ 7)ರ VIನೇ ಅಧ್ಯಾಯದ XIVನೇ ಭಾಗವು, ಆ ಅಧಿನಿಯಮದ 184ನೇ ಪ್ರಕರಣದ ಉಪಬಂಧಗಳಿಂದ ನಿಯಂತ್ರಿಸಲ್ಪಡತಕ್ಕದ್ದು" ಎಂಬ ಪದಗಳು ಮತ್ತು ಅಂಕಿಗಳ ಬದಲಿಗೆ, "ನ್ಯಾಯಾಧಿಕರಣಗಳ ಸುಧಾರಣಾ ಅಧಿನಿಯಮ, 2021, ಇದು, ಸದರಿ ಅಧಿನಿಯಮದ IIನೇ ಅಧ್ಯಾಯದ ಉಪಬಂಧಗಳಿಂದ ನಿಯಂತ್ರಿಸಲ್ಪಡತಕ್ಕದ್ದು" ಎಂಬ ಪದಗಳು ಮತ್ತು ಅಂಕಿಗಳನ್ನು ಪ್ರತ್ಯಾಯೋಜಿಸತಕ್ಕದ್ದು.

## ಅಧ್ಯಾಯ XI

### ರೈಲ್ವೇ ಕ್ಲೇಮುಗಳ ನ್ಯಾಯಾಧಿಕರಣ ಅಧಿನಿಯಮ, 1987ಕ್ಕೆ ತಿದ್ದುಪಡಿ

**16. 1987ರ 54ನೇ ಅಧಿನಿಯಮದ ತಿದ್ದುಪಡಿ.–** ರೈಲ್ವೇ ಕ್ಲೇಮುಗಳ ನ್ಯಾಯಾಧಿಕರಣ ಅಧಿನಿಯಮ, 1987ರ 9ಎ ಪ್ರಕರಣದಲ್ಲಿ, "ಹಣಕಾಸು ಅಧಿನಿಯಮ, 2017 (2017ರ 7)ರ VIನೇ ಅಧ್ಯಾಯದ XIVನೇ ಭಾಗವು, ಆ ಅಧಿನಿಯಮದ 184ನೇ ಪ್ರಕರಣದ ಉಪಬಂಧಗಳಿಂದ ನಿಯಂತ್ರಿಸಲ್ಪಡತಕ್ಕದ್ದು" ಎಂಬ ಪದಗಳು ಮತ್ತು ಅಂಕಿಗಳ ಬದಲಿಗೆ, "ನ್ಯಾಯಾಧಿಕರಣಗಳ ಸುಧಾರಣಾ ಅಧಿನಿಯಮ, 2021. ಇದು, ಸದರಿ ಅಧಿನಿಯಮದ IIನೇ ಅಧ್ಯಾಯದ ಉಪಬಂಧಗಳಿಂದ ನಿಯಂತ್ರಿಸಲ್ಪಡತಕ್ಕದ್ದು" ಎಂಬ ಪದಗಳು ಮತ್ತು ಅಂಕಿಗಳನ್ನು ಪ್ರತ್ಯಾಯೋಜಿಸತಕ್ಕದ್ದು.

## ಅಧ್ಯಾಯ XII

### ಭಾರತೀಯ ಭದ್ರತೆಗಳು ಮತ್ತು ವಿನಿಮಯ ಮಂಡಲಿ ಅಧಿನಿಯಮ, 1992ಕ್ಕೆ ತಿದ್ದುಪಡಿ

**17. 1992ರ 15ನೇ ಅಧಿನಿಯಮದ ತಿದ್ದುಪಡಿ.–** ಭಾರತೀಯ ಭದ್ರತೆಗಳು ಮತ್ತು ವಿನಿಮಯ ಮಂಡಲಿ ಅಧಿನಿಯಮ, 1992ರ 15ಕ್ಯುಎ ಪ್ರಕರಣದಲ್ಲಿ, "ಹಣಕಾಸು ಅಧಿನಿಯಮ, 2017 (2017ರ 7)ರ VIನೇ ಅಧ್ಯಾಯದ XIVನೇ ಭಾಗವು, ಆ ಅಧಿನಿಯಮದ 184ನೇ ಪ್ರಕರಣದ ಉಪಬಂಧಗಳಿಂದ ನಿಯಂತ್ರಿಸಲ್ಪಡತಕ್ಕದ್ದು" ಎಂಬ ಪದಗಳು ಮತ್ತು ಅಂಕಿಗಳ ಬದಲಿಗೆ, "ನ್ಯಾಯಾಧಿಕರಣಗಳ ಸುಧಾರಣಾ ಅಧಿನಿಯಮ, 2021, ಇದು, ಸದರಿ ಅಧಿನಿಯಮದ IIನೇ ಅಧ್ಯಾಯದ ಉಪಬಂಧಗಳಿಂದ ನಿಯಂತ್ರಿಸಲ್ಪಡತಕ್ಕದ್ದು" ಎಂಬ ಪದಗಳು ಮತ್ತು ಅಂಕಿಗಳನ್ನು ಪ್ರತ್ಯಾಯೋಜಿಸತಕ್ಕದ್ದು.

## ಅಧ್ಯಾಯ XIII

### ಸಾಲ ವಸೂಲಾತಿ ಮತ್ತು ದಿವಾಳಿತನ ಅಧಿನಿಯಮ, 1993ಕ್ಕೆ ತಿದ್ದುಪಡಿ

**18. 1993ರ 51ನೇ ಅಧಿನಿಯಮದ ತಿದ್ದುಪಡಿ.–** ಸಾಲ ವಸೂಲಾತಿ ಮತ್ತು ದಿವಾಳಿತನ ಅಧಿನಿಯಮ, 1993ರಲ್ಲಿ,–

(ಎ) 6ಎ ಪ್ರಕರಣದಲ್ಲಿ, "ಹಣಕಾಸು ಅಧಿನಿಯಮ, 2017 (2017ರ 7)ರ VIನೇ ಅಧ್ಯಾಯದ XIVನೇ ಭಾಗವು, ಆ ಅಧಿನಿಯಮದ 184ನೇ ಪ್ರಕರಣದ ಉಪಬಂಧಗಳಿಂದ ನಿಯಂತ್ರಿಸಲ್ಪಡತಕ್ಕದ್ದು" ಎಂಬ ಪದಗಳು ಮತ್ತು ಅಂಕಿಗಳ ಬದಲಿಗೆ, "ನ್ಯಾಯಾಧಿಕರಣಗಳ ಸುಧಾರಣಾ ಅಧಿನಿಯಮ, 2021. ಇದು, ಸದರಿ ಅಧಿನಿಯಮದ IIನೇ ಅಧ್ಯಾಯದ ಉಪಬಂಧಗಳಿಂದ ನಿಯಂತ್ರಿಸಲ್ಪಡತಕ್ಕದ್ದು" ಎಂಬ ಪದಗಳು ಮತ್ತು ಅಂಕಿಗಳನ್ನು ಪ್ರತ್ಯಾಯೋಜಿಸತಕ್ಕದ್ದು.

(ಬಿ) 15ಎ ಪ್ರಕರಣದಲ್ಲಿ, "ಹಣಕಾಸು ಅಧಿನಿಯಮ, 2017 (2017ರ 7)ರ VIನೇ ಅಧ್ಯಾಯದ XIVನೇ ಭಾಗವು, ಆ ಅಧಿನಿಯಮದ 184ನೇ ಪ್ರಕರಣದ ಉಪಬಂಧಗಳಿಂದ ನಿಯಂತ್ರಿಸಲ್ಪಡತಕ್ಕದ್ದು" ಎಂಬ ಪದಗಳು ಮತ್ತು ಅಂಕಿಗಳ ಬದಲಿಗೆ, "ನ್ಯಾಯಾಧಿಕರಣಗಳ ಸುಧಾರಣಾ ಅಧಿನಿಯಮ, 2021. ಇದು, ಸದರಿ ಅಧಿನಿಯಮದ IIನೇ ಅಧ್ಯಾಯದ ಉಪಬಂಧಗಳಿಂದ ನಿಯಂತ್ರಿಸಲ್ಪಡತಕ್ಕದ್ದು" ಎಂಬ ಪದಗಳು ಮತ್ತು ಅಂಕಿಗಳನ್ನು ಪ್ರತ್ಯಾಯೋಜಿಸತಕ್ಕದ್ದು.

## ಅಧ್ಯಾಯ XIV

### ಭಾರತ ವಿಮಾನ ನಿಲ್ದಾಣಗಳ ಪ್ರಾಧಿಕಾರ ಅಧಿನಿಯಮ, 1994ಕ್ಕೆ ತಿದ್ದುಪಡಿಗಳು

**19. 1994ರ 55ನೇ ಅಧಿನಿಯಮದ ತಿದ್ದುಪಡಿ.–** ಭಾರತ ವಿಮಾನ ನಿಲ್ದಾಣಗಳ ಪ್ರಾಧಿಕಾರ ಅಧಿನಿಯಮ, 1994ರಲ್ಲಿ,–

(ಎ) 28ಎ ಪ್ರಕರಣದಲ್ಲಿ, (ಇ) ಖಂಡವನ್ನು ಬಿಟ್ಟುಬಿಡತಕ್ಕದ್ದು;

(ಬಿ) 28ಇ ಪ್ರಕರಣದಲ್ಲಿ, "ನ್ಯಾಯಾಧಿಕರಣ" ಎಂಬ ಪದ ಬಳಕೆಯಾಗಿರುವ ಎರಡೂ ಕಡೆಗಳಲ್ಲಿ "ಕೇಂದ್ರ ಸರ್ಕಾರ" ಎಂಬ ಪದಗಳನ್ನು ಪ್ರತ್ಯಾಯೋಜಿಸತಕ್ಕದ್ದು;

(ಸಿ) 28ಐ, 28ಜೆ ಮತ್ತು 28ಜೆಎ ಪ್ರಕರಣಗಳನ್ನು ಬಿಟ್ಟುಬಿಡತಕ್ಕದ್ದು;

(ಡಿ) 28ಕೆ ಪ್ರಕರಣದಲ್ಲಿ,–

(i) (1)ನೇ ಉಪಪ್ರಕರಣದಲ್ಲಿ,–

(ಎ) "ನಿಯಮಿಸಬಹುದಾದಂಥ ರೂಪದಲ್ಲಿರುವ ನ್ಯಾಯಾಧಿಕರಣವು" ಎಂಬ ಪದಗಳ ಬದಲಿಗೆ, "ಉಚ್ಚ ನ್ಯಾಯಾಲಯ" ಎಂಬ ಪದಗಳನ್ನು ಪ್ರತ್ಯಾಯೋಜಿಸತಕ್ಕದ್ದು;

(ಬಿ) ಪರಂತುಕದಲ್ಲಿ, "ನ್ಯಾಯಾಧಿಕರಣ" ಎಂಬ ಪದದ ಬದಲಿಗೆ, "ಉಚ್ಚ ನ್ಯಾಯಾಲಯ" ಎಂಬ ಪದಗಳನ್ನು ಪ್ರತ್ಯಾಯೋಜಿಸತಕ್ಕದ್ದು;

(ii) (2), (3), (4) ಮತ್ತು (5) ಉಪಪ್ರಕರಣಗಳನ್ನು ಬಿಟ್ಟುಬಿಡತಕ್ಕದ್ದು;

(ಇ) 28ಎಲ್ ಪ್ರಕರಣವನ್ನು ಬಿಟ್ಟುಬಿಡತಕ್ಕದ್ದು;

(ಎಫ್) 28ಎಂ ಪ್ರಕರಣದಲ್ಲಿ, "ಅಥವಾ ನ್ಯಾಯಮಂಡಳಿ" ಎಂಬ ಪದಗಳನ್ನು ಬಿಟ್ಟುಬಿಡತಕ್ಕದ್ದು;

(ಜಿ) 28ಎನ್ ಪ್ರಕರಣದಲ್ಲಿ (2)ನೇ ಉಪಪ್ರಕರಣದಲ್ಲಿ, "ನ್ಯಾಯಾಧಿಕರಣ" ಎಂಬ ಪದದ ಬದಲಿಗೆ, "ಉಚ್ಚ ನ್ಯಾಯಾಲಯ" ಎಂಬ ಪದಗಳನ್ನು ಪ್ರತ್ಯಾಯೋಜಿಸತಕ್ಕದ್ದು;

(ಹೆಚ್) 33ನೇ ಪ್ರಕರಣದಲ್ಲಿ, "ಅಥವಾ ನ್ಯಾಯಾಧಿಕರಣದ ಅಧ್ಯಕ್ಷ" ಎಂಬ ಪದಗಳನ್ನು ಬಿಟ್ಟುಬಿಡತಕ್ಕದ್ದು;

(ಐ) 41ನೇ ಪ್ರಕರಣದಲ್ಲಿ (2)ನೇ ಉಪಪ್ರಕರಣದಲ್ಲಿ, (ಜಿvi), (ಜಿvii), (ಜಿviii) ಮತ್ತು (ಜಿix) ಖಂಡಗಳನ್ನು ಬಿಟ್ಟುಬಿಡತಕ್ಕದ್ದು.

## ಅಧ್ಯಾಯ XV

### ಭಾರತ ಟೆಲಿಕಾಂ ನಿಯಂತ್ರಣ ಪ್ರಾಧಿಕಾರ, 1997ಕ್ಕೆ ತಿದ್ದುಪಡಿ

**20. 1997ರ 24ನೇ ಅಧಿನಿಯಮದ ತಿದ್ದುಪಡಿ.–** ಭಾರತ ಟೆಲಿಕಾಂ ನಿಯಂತ್ರಣ ಪ್ರಾಧಿಕಾರ, 1997ರ 14ಜಿಎ ಪ್ರಕರಣದಲ್ಲಿ, "ಹಣಕಾಸು ಅಧಿನಿಯಮ, 2017ರ (2017ರ 7) VIನೇ ಅಧ್ಯಾಯದ XIVನೇ ಭಾಗವು, ಆ ಅಧಿನಿಯಮದ 184ನೇ ಪ್ರಕರಣದ ಉಪಬಂಧಗಳಿಂದ ನಿಯಂತ್ರಿಸಲ್ಪಡತಕ್ಕದ್ದು" ಎಂಬ ಪದಗಳು ಮತ್ತು ಅಂಕಿಗಳ ಬದಲಿಗೆ, "ನ್ಯಾಯಾಧಿಕರಣಗಳ ಸುಧಾರಣಾ ಅಧಿನಿಯಮ, 2021, ಇದು, ಸದರಿ ಅಧಿನಿಯಮದ IIನೇ ಅಧ್ಯಾಯದ ಉಪಬಂಧಗಳಿಂದ ನಿಯಂತ್ರಿಸಲ್ಪಡತಕ್ಕದ್ದು" ಎಂಬ ಪದಗಳು ಮತ್ತು ಅಂಕಿಗಳನ್ನು ಪ್ರತ್ಯಾಯೋಜಿಸತಕ್ಕದ್ದು.

## ಅಧ್ಯಾಯ XVI

### ವ್ಯಾಪಾರ ಚಿಹ್ನೆಗಳ ಅಧಿನಿಯಮ, 1999ಕ್ಕೆ ತಿದ್ದುಪಡಿಗಳು

**21. 1999ರ 47ನೇ ಅಧಿನಿಯಮದ ತಿದ್ದುಪಡಿ.–** ವ್ಯಾಪಾರ ಚಿಹ್ನೆಗಳ ಅಧಿನಿಯಮ, 1999 ರಲ್ಲಿ,–

(ಎ) 2ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿ,–

(i) (ಎ), (ಡಿ), (ಎಫ್), (ಕೆ), (ಎನ್), (ಝಡ್‌ಇ) ಮತ್ತು (ಝಡ್‌ಎಫ್) ಖಂಡಗಳನ್ನು ಬಿಟ್ಟುಬಿಡತಕ್ಕದ್ದು;

(ii) (ಎಸ್) ಖಂಡದ ಬದಲಿಗೆ, ಈ ಮುಂದಿನ ಖಂಡವನ್ನು ಪ್ರತ್ಯಾಯೋಜಿಸತಕ್ಕದ್ದು, ಎಂದರೆ:–

'(ಎಸ್) "ನಿಯಮಿಸಲಾದುದು" ಎಂದರೆ:–

(i) ಉಚ್ಚ ನ್ಯಾಯಾಲಯದ ಮುಂದಿರುವ ವ್ಯವಹರಣೆಗಳ ಸಂಬಂಧವಾಗಿ, ಉಚ್ಚ ನ್ಯಾಯಾಲಯವು ರಚಿಸಿದ ನಿಯಮಗಳ ಮೂಲಕ ನಿಯಮಿಸಲಾದುದು; ಮತ್ತು

(ii) ಇತರ ಸಂದರ್ಭಗಳಲ್ಲಿ, ಈ ಅಧಿನಿಯಮದ ಮೇರೆಗೆ ರಚಿಸಲಾದ ನಿಯಮಗಳ ಮೂಲಕ ನಿಯಮಿಸಲಾದುದು;'

(ಬಿ) 10ನೇ ಪ್ರಕರಣದಲ್ಲಿ, "ನ್ಯಾಯಾಧಿಕರಣವು" ಎಂಬ ಪದದ ಬದಲಿಗೆ, "ಸಂದರ್ಭಾನುಸಾರ, ರಿಜಿಸ್ಟ್ರಾರ್ ಅಥವಾ ಉಚ್ಚ ನ್ಯಾಯಾಲಯವು" ಎಂಬ ಪದಗಳನ್ನು ಪ್ರತ್ಯಾಯೋಜಿಸತಕ್ಕದ್ದು;

(ಸಿ) 26ನೇ ಪ್ರಕರಣದಲ್ಲಿ, "ನ್ಯಾಯಾಧಿಕರಣವು" ಎಂಬ ಪದದ ಬದಲಿಗೆ, "ಸಂದರ್ಭಾನುಸಾರ, ರಿಜಿಸ್ಟ್ರಾರ್ ಅಥವಾ ಉಚ್ಚ ನ್ಯಾಯಾಲಯವು" ಎಂಬ ಪದಗಳನ್ನು ಪ್ರತ್ಯಾಯೋಜಿಸತಕ್ಕದ್ದು;

(ಡಿ) 46ನೇ ಪ್ರಕರಣದ (3)ನೇ ಉಪಪ್ರಕರಣದಲ್ಲಿ, "ನ್ಯಾಯಾಧಿಕರಣವು" ಎಂಬ ಪದದ ಬದಲಿಗೆ, "ಸಂದರ್ಭಾನುಸಾರ, ರಿಜಿಸ್ಟ್ರಾರ್ ಅಥವಾ ಉಚ್ಚ ನ್ಯಾಯಾಲಯವು" ಎಂಬ ಪದಗಳನ್ನು ಪ್ರತ್ಯಾಯೋಜಿಸತಕ್ಕದ್ದು;

(ಇ) 47ನೇ ಪ್ರಕರಣದಲ್ಲಿ,–

(i) "ಅಪೀಲು ಮಂಡಳಿ" ಎಂಬ ಪದಗಳು ಬರುವ ಕಡೆಗಳಲ್ಲಿ, ಅವುಗಳ ಬದಲಿಗೆ "ಉಚ್ಚ ನ್ಯಾಯಾಲಯ" ಎಂಬ ಪದಗಳನ್ನು ಪ್ರತ್ಯಾಯೋಜಿಸತಕ್ಕದ್ದು;

(ii) "ನ್ಯಾಯಾಧಿಕರಣ" ಎಂಬ ಪದ ಬರುವ ಕಡೆಗಳಲ್ಲಿ, ಅವುಗಳ ಬದಲಿಗೆ "ಸಂದರ್ಭಾನುಸಾರ, ರಿಜಿಸ್ಟ್ರಾರ್ ಅಥವಾ ಉಚ್ಚ ನ್ಯಾಯಾಲಯವು" ಎಂಬ ಪದಗಳನ್ನು ಪ್ರತ್ಯಾಯೋಜಿಸತಕ್ಕದ್ದು;

(ಎಫ್) 55ನೇ ಪ್ರಕರಣದಲ್ಲಿ (1)ನೇ ಉಪಪ್ರಕರಣದಲ್ಲಿ, "ನ್ಯಾಯಾಧಿಕರಣ" ಎಂಬ ಪದದ ಬದಲಿಗೆ, "ರಿಜಿಸ್ಟ್ರಾರ್ ಅಥವಾ ಉಚ್ಚ ನ್ಯಾಯಾಲಯ, ಸಂದರ್ಭಾನುಸಾರವಾಗಿ," ಎಂಬ ಪದಗಳನ್ನು ಪ್ರತ್ಯಾಯೋಜಿಸತಕ್ಕದ್ದು;

(ಜಿ) 57ನೇ ಪ್ರಕರಣದಲ್ಲಿ,–

(i) "ಅಪೀಲು ಮಂಡಳಿ" ಪದಗಳು ಬರುವ ಕಡೆಗಳಲ್ಲಿ, ಅವುಗಳ ಬದಲಿಗೆ "ಉಚ್ಚ ನ್ಯಾಯಾಲಯ" ಎಂಬ ಪದಗಳನ್ನು ಪ್ರತ್ಯಾಯೋಜಿಸತಕ್ಕದ್ದು;

(ii) "ನ್ಯಾಯಾಧಿಕರಣ" ಎಂಬ ಪದ ಬರುವ ಕಡೆಗಳಲ್ಲಿ, ಅವುಗಳ ಬದಲಿಗೆ "ಸಂದರ್ಭಾನುಸಾರ, ರಿಜಿಸ್ಟ್ರಾರ್ ಅಥವಾ ಉಚ್ಚ ನ್ಯಾಯಾಲಯವು" ಎಂಬ ಪದಗಳನ್ನು ಪ್ರತ್ಯಾಯೋಜಿಸತಕ್ಕದ್ದು;

(ಹೆಚ್) 71ನೇ ಪ್ರಕರಣದ (3)ನೇ ಉಪಪ್ರಕರಣದಲ್ಲಿ, "ನ್ಯಾಯಾಧಿಕರಣ" ಎಂಬ ಪದದ ಬದಲಿಗೆ, "ಸಂದರ್ಭಾನುಸಾರ ರಿಜಿಸ್ಟ್ರಾರ್ ಅಥವಾ ಉಚ್ಚ ನ್ಯಾಯಾಲಯವು" ಎಂಬ ಪದಗಳನ್ನು ಪ್ರತ್ಯಾಯೋಜಿಸತಕ್ಕದ್ದು;

(ಐ) XIನೇ ಅಧ್ಯಾಯದಲ್ಲಿ, ಅಧ್ಯಾಯದ ಶೀರ್ಷಿಕೆಯ ಬದಲಿಗೆ, "ಅಪೀಲುಗಳು" ಎಂಬ ಅಧ್ಯಾಯ ಶೀರ್ಷಿಕೆಯನ್ನು ಪ್ರತ್ಯಾಯೋಜಿಸತಕ್ಕದ್ದು;

(ಜೆ) 83, 85, 86, 87, 88, 89, 89ಎ ಮತ್ತು 90ನೇ ಪ್ರಕರಣಗಳನ್ನು ಬಿಟ್ಟುಬಿಡತಕ್ಕದ್ದು;

(ಕೆ) 91ನೇ ಪ್ರಕರಣದಲ್ಲಿ, "ಅಪೀಲು ಮಂಡಳಿ" ಎಂಬ ಪದಗಳು ಬರುವ ಕಡೆಗಳಲ್ಲಿ, ಅವುಗಳ ಬದಲಿಗೆ "ಉಚ್ಚ ನ್ಯಾಯಾಲಯವು" ಎಂಬ ಪದಗಳನ್ನು ಪ್ರತ್ಯಾಯೋಜಿಸತಕ್ಕದ್ದು;

(ಎಲ್) 92 ಮತ್ತು 93ನೇ ಪ್ರಕರಣಗಳನ್ನು ಬಿಟ್ಟುಬಿಡತಕ್ಕದ್ದು;

(ಎಂ) 94ನೇ ಪ್ರಕರಣದ ಬದಲಿಗೆ, ಈ ಮುಂದಿನ ಪ್ರಕರಣವನ್ನು ಪ್ರತ್ಯಾಯೋಜಿಸತಕ್ಕದ್ದು, ಎಂದರೆ:–

"**94. ರಿಜಿಸ್ಟ್ರಾರ್ ಮುಂದೆ ಹಾಜರಾಗುವುದಕ್ಕೆ ಪ್ರತಿಷೇಧ.–** ಅಧ್ಯಕ್ಷ, ಉಪಾಧ್ಯಕ್ಷ ಅಥವಾ ಇತರ ಸದಸ್ಯರು ಪದವನ್ನು ಹೊಂದಿರುವುದು ನಿಂತುಹೋದ ಮೇಲೆ ಅವರು ರಿಜಿಸ್ಟ್ರಾರ್ ಮುಂದೆ ಹಾಜರಾಗತಕ್ಕದ್ದಲ್ಲ.";

(ಎನ್) 95 ಮತ್ತು 96ನೇ ಪ್ರಕರಣವನ್ನು ಬಿಟ್ಟುಬಿಡತಕ್ಕದ್ದು;

(ಒ) 97ನೇ ಪ್ರಕರಣದಲ್ಲಿ, "ಅಪೀಲು ಮಂಡಳಿ" ಎಂಬ ಪದಗಳು ಬರುವ ಕಡೆಗಳಲ್ಲಿ, ಅವುಗಳ ಬದಲಿಗೆ "ಉಚ್ಚ ನ್ಯಾಯಾಲಯ" ಎಂಬ ಪದಗಳನ್ನು ಪ್ರತ್ಯಾಯೋಜಿಸತಕ್ಕದ್ದು;

(ಪಿ) 98ನೇ ಪ್ರಕರಣದಲ್ಲಿ, "ಅಪೀಲು ಮಂಡಳಿ" ಅಥವಾ "ಮಂಡಳಿ" ಎಂಬ ಪದಗಳು ಬರುವ ಕಡೆಗಳಲ್ಲಿ, ಅವುಗಳ ಬದಲಿಗೆ "ಉಚ್ಚ ನ್ಯಾಯಾಲಯ" ಎಂಬ ಪದಗಳನ್ನು ಪ್ರತ್ಯಾಯೋಜಿಸತಕ್ಕದ್ದು;

(ಕ್ಯೂ) 99 ಮತ್ತು 100ನೇ ಪ್ರಕರಣವನ್ನು ಬಿಟ್ಟುಬಿಡತಕ್ಕದ್ದು;

(ಆರ್) 113ನೇ ಪ್ರಕರಣದಲ್ಲಿ,–

(i) "ಅಪೀಲು ಮಂಡಳಿ" ಎಂಬ ಪದಗಳು ಬಳಕೆಯಾಗಿರುವ ಎರಡೂ ಕಡೆಗಳಲ್ಲಿ, ಅವುಗಳ ಬದಲಿಗೆ, "ಉಚ್ಚ ನ್ಯಾಯಾಲಯ" ಎಂಬ ಪದಗಳನ್ನು ಪ್ರತ್ಯಾಯೋಜಿಸತಕ್ಕದ್ದು;

(ii) "ನ್ಯಾಯಾಧಿಕರಣ" ಎಂಬ ಪದದ ಬದಲಿಗೆ, "ಸಂದರ್ಭಾನುಸಾರ, ರಿಜಿಸ್ಟ್ರಾರ್ ಅಥವಾ ಉಚ್ಚ ನ್ಯಾಯಾಲಯ" ಎಂಬ ಪದಗಳನ್ನು ಪ್ರತ್ಯಾಯೋಜಿಸತಕ್ಕದ್ದು;

(ಎಸ್) 123ನೇ ಪ್ರಕರಣದಲ್ಲಿ, "ಮತ್ತು ಅಪೀಲು ಮಂಡಳಿಯ ಪ್ರತಿಯೊಬ್ಬ ಸದಸ್ಯ" ಎಂಬ ಪದಗಳನ್ನು ಬಿಟ್ಟುಬಿಡತಕ್ಕದ್ದು;

(ಟಿ) 124 ಮತ್ತು 125ನೇ ಪ್ರಕರಣದಲ್ಲಿ, "ಅಪೀಲು ಮಂಡಳಿ" ಎಂಬ ಪದಗಳು ಬರುವ ಕಡೆಗಳಲ್ಲಿ, ಅವುಗಳ ಬದಲಿಗೆ "ಉಚ್ಚ ನ್ಯಾಯಾಲಯ" ಎಂಬ ಪದಗಳನ್ನು ಪ್ರತ್ಯಾಯೋಜಿಸತಕ್ಕದ್ದು;

(ಯು) 130ನೇ ಪ್ರಕರಣದಲ್ಲಿ, "ಅಪೀಲು ಮಂಡಳಿ ಅಥವಾ" ಎಂಬ ಪದಗಳನ್ನು ಬಿಟ್ಟುಬಿಡತಕ್ಕದ್ದು;

(ವಿ) 141ನೇ ಪ್ರಕರಣದಲ್ಲಿ, "ಅಪೀಲು ಮಂಡಳಿ" ಎಂಬ ಪದಗಳು ಬಳಕೆಯಾಗಿರುವ ಎರಡೂ ಕಡೆಗಳಲ್ಲಿ, ಅವುಗಳ ಬದಲಿಗೆ "ಉಚ್ಚ ನ್ಯಾಯಾಲಯ" ಎಂಬ ಪದಗಳನ್ನು ಪ್ರತ್ಯಾಯೋಜಿಸತಕ್ಕದ್ದು;

(ಡಬ್ಲ್ಯೂ) 144ನೇ ಪ್ರಕರಣದಲ್ಲಿ "ನ್ಯಾಯಾಧಿಕರಣ" ಎಂಬ ಪದದ ಬದಲಿಗೆ, "ಸಂದರ್ಭಾನುಸಾರ, ರಿಜಿಸ್ಟ್ರಾರ್ ಅಥವಾ ಉಚ್ಚ ನ್ಯಾಯಾಲಯವು" ಎಂಬ ಪದಗಳನ್ನು ಪ್ರತ್ಯಾಯೋಜಿಸತಕ್ಕದ್ದು;

(ಎಕ್ಸ್) 157ನೇ ಪ್ರಕರಣದಲ್ಲಿ, (2)ನೇ ಉಪಪ್ರಕರಣದಲ್ಲಿ,–

(i) (xxxi) ಮತ್ತು (xxxii)ನೇ ಖಂಡವನ್ನು ಬಿಟ್ಟುಬಿಡತಕ್ಕದ್ದು;

(ii) (xxxiii)ನೇ ಖಂಡದಲ್ಲಿ, "ಅಪೀಲು ಮಂಡಳಿ" ಎಂಬ ಪದಗಳ ಬದಲಿಗೆ, "ಉಚ್ಚ ನ್ಯಾಯಾಲಯ" ಎಂಬ ಪದಗಳನ್ನು ಪ್ರತ್ಯಾಯೋಜಿಸತಕ್ಕದ್ದು;

## ಅಧ್ಯಾಯ XVII

### ಸರಕುಗಳ ಭೌಗೋಳಿಕ ಸಂಕೇತಗಳ (ನೋಂದಣಿ ಮತ್ತು ಸಂರಕ್ಷಣೆ) ಅಧಿನಿಯಮ, 1999ಕ್ಕೆ ತಿದ್ದುಪಡಿಗಳು

**22. 1999ರ 48ನೇ ಅಧಿನಿಯಮದ ತಿದ್ದುಪಡಿ.–** ಸರಕುಗಳ ಭೌಗೋಳಿಕ ಸೂಚನೆಗಳ (ನೋಂದಣಿ ಮತ್ತು ಸಂರಕ್ಷಣೆ) ಅಧಿನಿಯಮ, 1999ರಲ್ಲಿ,–

(ಎ) 2ನೇ ಪ್ರಕರಣದಲ್ಲಿ, (1)ನೇ ಉಪಪ್ರಕರಣದಲ್ಲಿ (ಎ) ಮತ್ತು (ಪಿ) ಖಂಡಗಳನ್ನು ಬಿಟ್ಟುಬಿಡತಕ್ಕದ್ದು;

(ಬಿ) 19ನೇ ಪ್ರಕರಣದಲ್ಲಿ, "ನ್ಯಾಯಾಧಿಕರಣ" ಎಂಬ ಪದದ ಬದಲಿಗೆ, "ಸಂದರ್ಭಾನುಸಾರ, ರಿಜಿಸ್ಟ್ರಾರ್ ಅಥವಾ ಉಚ್ಚ ನ್ಯಾಯಾಲಯ," ಎಂಬ ಪದಗಳನ್ನು ಪ್ರತ್ಯಾಯೋಜಿಸತಕ್ಕದ್ದು;

(ಸಿ) 23ನೇ ಪ್ರಕರಣದಲ್ಲಿ, "ಮತ್ತು ಯಾವ ಅಪೀಲು ಮಂಡಳಿಯ ಮುಂದೆ" ಎಂಬ ಪದಗಳ ಬದಲಿಗೆ, "ಯಾರ ಮುಂದೆ" ಎಂಬ ಪದವನ್ನು ಪ್ರತ್ಯಾಯೋಜಿಸತಕ್ಕದ್ದು;

(ಡಿ) 27ನೇ ಪ್ರಕರಣದಲ್ಲಿ,–

(i) "ಅಪೀಲು ಮಂಡಳಿ" ಎಂಬ ಪದಗಳು ಬರುವ ಕಡೆಗಳಲ್ಲಿ, ಅವುಗಳ ಬದಲಿಗೆ, "ಉಚ್ಚ ನ್ಯಾಯಾಲಯದ" ಎಂಬ ಪದಗಳನ್ನು ಪ್ರತ್ಯಾಯೋಜಿಸತಕ್ಕದ್ದು;

(ii) "ನ್ಯಾಯಾಧಿಕರಣ" ಎಂಬ ಪದವು ಬರುವ ಕಡೆಗಳಲ್ಲಿ, ಅದರ ಬದಲಿಗೆ, "ಸಂದರ್ಭಾನುಸಾರ, ರಿಜಿಸ್ಟ್ರಾರ್ ಅಥವಾ ಉಚ್ಚ ನ್ಯಾಯಾಲಯ," ಎಂಬ ಪದಗಳನ್ನು ಪ್ರತ್ಯಾಯೋಜಿಸತಕ್ಕದ್ದು;

(ಇ) VIIನೇ ಅಧ್ಯಾಯದಲ್ಲಿ, ಅಧ್ಯಾಯ ಶೀರ್ಷಿಕೆಯ ಬದಲಿಗೆ, "ಅಪೀಲುಗಳು" ಅಧ್ಯಾಯ ಶೀರ್ಷಿಕೆಯನ್ನು ಪ್ರತ್ಯಾಯೋಜಿಸತಕ್ಕದ್ದು;

(ಎಫ್) 31ನೇ ಪ್ರಕರಣದಲ್ಲಿ,–

(i) "ಅಪೀಲು ಮಂಡಳಿ" ಎಂಬ ಪದಗಳು ಬರುವ ಕಡೆಗಳಲ್ಲಿ, ಅವುಗಳ ಬದಲಿಗೆ, "ಉಚ್ಚ ನ್ಯಾಯಾಲಯ" ಎಂಬ ಪದಗಳನ್ನು ಪ್ರತ್ಯಾಯೋಜಿಸತಕ್ಕದ್ದು;

(ii) (3)ನೇ ಉಪಪ್ರಕರಣವನ್ನು ಬಿಟ್ಟುಬಿಡತಕ್ಕದ್ದು;

(ಜಿ) 32ನೇ ಮತ್ತು 33ನೇ ಪ್ರಕರಣವನ್ನು ಬಿಟ್ಟುಬಿಡತಕ್ಕದ್ದು;

(ಹೆಚ್) "ಅಪೀಲು ಮಂಡಳಿ" ಎಂಬ ಪದಗಳು ಬರುವ ಕಡೆಗಳಲ್ಲಿ, ಅವುಗಳ ಬದಲಿಗೆ, "ಉಚ್ಚ ನ್ಯಾಯಾಲಯ" ಎಂಬ ಪದಗಳನ್ನು ಪ್ರತ್ಯಾಯೋಜಿಸತಕ್ಕದ್ದು;

(ಐ) 36ನೇ ಪ್ರಕರಣವನ್ನು ಬಿಟ್ಟುಬಿಡತಕ್ಕದ್ದು;

(ಜೆ) 48ನೇ ಪ್ರಕರಣದಲ್ಲಿ,–

(i) "ಅಪೀಲು ಮಂಡಳಿ" ಎಂಬ ಪದಗಳು ಬರುವ ಕಡೆಗಳಲ್ಲಿ, ಅವುಗಳ ಬದಲಿಗೆ, "ಉಚ್ಚ ನ್ಯಾಯಾಲಯ" ಎಂಬ ಪದಗಳನ್ನು ಪ್ರತ್ಯಾಯೋಜಿಸತಕ್ಕದ್ದು;

(ii) "ನ್ಯಾಯಾಧಿಕರಣ" ಎಂಬ ಪದವು ಬರುವ ಕಡೆಗಳಲ್ಲಿ, ಅದರ ಬದಲಿಗೆ, "ಸಂದರ್ಭಾನುಸಾರ, ರಿಜಿಸ್ಟ್ರಾರ್ ಅಥವಾ ಉಚ್ಚ ನ್ಯಾಯಾಲಯ," ಎಂಬ ಪದಗಳನ್ನು ಪ್ರತ್ಯಾಯೋಜಿಸತಕ್ಕದ್ದು;

(ಕೆ) 57 ಮತ್ತು 58ನೇ ಪ್ರಕರಣಗಳಲ್ಲಿ, "ಅಪೀಲು ಮಂಡಳಿ" ಎಂಬ ಪದಗಳು ಬರುವ ಕಡೆಗಳಲ್ಲಿ, ಅವುಗಳ ಬದಲಿಗೆ, "ಉಚ್ಚ ನ್ಯಾಯಾಲಯ" ಎಂಬ ಪದಗಳನ್ನು ಪ್ರತ್ಯಾಯೋಜಿಸತಕ್ಕದ್ದು;

(ಎಲ್) 63ನೇ ಪ್ರಕರಣದಲ್ಲಿ, "ಅಪೀಲು ಮಂಡಳಿ ಅಥವಾ" ಎಂಬ ಪದಗಳನ್ನು ಬಿಟ್ಟುಬಿಡತಕ್ಕದ್ದು;

(ಎಂ) 72ನೇ ಪ್ರಕರಣದಲ್ಲಿ, "ಅಪೀಲು ಮಂಡಳಿ" ಎಂಬ ಪದಗಳು ಬರುವ ಕಡೆಗಳಲ್ಲಿ, ಅವುಗಳ ಬದಲಿಗೆ, "ಉಚ್ಚ ನ್ಯಾಯಾಲಯ" ಎಂಬ ಪದಗಳನ್ನು ಪ್ರತ್ಯಾಯೋಜಿಸತಕ್ಕದ್ದು;

(ಎನ್) 75ನೇ ಪ್ರಕರಣದಲ್ಲಿ, "ನ್ಯಾಯಾಧಿಕರಣ" ಎಂಬ ಪದದ ಬದಲಿಗೆ, "ಸಂದರ್ಭಾನುಸಾರ, ರಿಜಿಸ್ಟ್ರಾರ್ ಅಥವಾ ಉಚ್ಚ ನ್ಯಾಯಾಲಯ" ಎಂಬ ಪದಗಳನ್ನು ಪ್ರತ್ಯಾಯೋಜಿಸತಕ್ಕದ್ದು;

(ಒ) 87ನೇ ಪ್ರಕರಣದಲ್ಲಿ, (2)ನೇ ಉಪಪ್ರಕರಣದಲ್ಲಿ, (ಎನ್) ಖಂಡವನ್ನು ಬಿಟ್ಟುಬಿಡತಕ್ಕದ್ದು.

## ಅಧ್ಯಾಯ XVIII

### ಸಸ್ಯ ಪ್ರಭೇದಗಳು ಮತ್ತು ರೈತರ ಹಕ್ಕುಗಳ ಸಂರಕ್ಷಣಾ ಅಧಿನಿಯಮ, 2001ಕ್ಕೆ ತಿದ್ದುಪಡಿಗಳು

**23. 2001ರ ಅಧಿನಿಯಮ 53ರ ತಿದ್ದುಪಡಿ.–** ಸಸ್ಯ ಪ್ರಭೇದಗಳು ಮತ್ತು ರೈತರ ಹಕ್ಕುಗಳ ಸಂರಕ್ಷಣಾ ಅಧಿನಿಯಮ, 2001ರಲ್ಲಿ,–

(ಎ) 2ನೇ ಪ್ರಕರಣದಲ್ಲಿ,–

(i) (ಡಿ), (ಎನ್) ಮತ್ತು (ಒ) ಖಂಡಗಳನ್ನು ಬಿಟ್ಟುಬಿಡತಕ್ಕದ್ದು;

(ii) (ಕ್ಯೂ) ಖಂಡದ ಬದಲಿಗೆ, ಈ ಮುಂದಿನ ಖಂಡವನ್ನು ಪ್ರತ್ಯಾಯೋಜಿಸತಕ್ಕದ್ದು, ಎಂದರೆ:–

'(ಕ್ಯೂ) "ನಿಯಮಿಸಲಾದುದು" ಎಂದರೆ,–

(i) ಉಚ್ಚ ನ್ಯಾಯಾಲಯದ ಮುಂದಿರುವ ವ್ಯವಹರಣೆಗಳ ಸಂಬಂಧದಲ್ಲಿ, ಉಚ್ಚ ನ್ಯಾಯಾಲಯವು ರಚಿಸಿದ ನಿಯಮಗಳ ಮೂಲಕ ನಿಯಮಿಸಲಾದುದು; ಮತ್ತು

(ii) ಇತರ ಸಂದರ್ಭಗಳಲ್ಲಿ, ಈ ಅಧಿನಿಯಮದ ಮೇರೆಗೆ ರಚಿಸಲಾದ ನಿಯಮಗಳ ಮೂಲಕ ನಿಯಮಿಸಲಾದುದು;'

(iii) (ವೈ) ಮತ್ತು (ಝಡ್) ಖಂಡಗಳನ್ನು ಬಿಟ್ಟುಬಿಡತಕ್ಕದ್ದು;

(ಬಿ) 44ನೇ ಪ್ರಕರಣದಲ್ಲಿ, "ಅಥವಾ ನ್ಯಾಯಾಧಿಕರಣ" ಎಂಬ ಪದಗಳನ್ನು ಬಿಟ್ಟುಬಿಡತಕ್ಕದ್ದು;

(ಸಿ) VIIIನೇ ಅಧ್ಯಾಯದಲ್ಲಿ, ಅಧ್ಯಾಯ ಶೀರ್ಷಿಕೆಯ ಬದಲಿಗೆ, "ಅಪೀಲುಗಳು" ಅಧ್ಯಾಯ ಶೀರ್ಷಿಕೆಯನ್ನು ಪ್ರತ್ಯಾಯೋಜಿಸತಕ್ಕದ್ದು;

(ಡಿ) 54 ಮತ್ತು 55ನೇ ಪ್ರಕರಣಗಳನ್ನು ಬಿಟ್ಟುಬಿಡತಕ್ಕದ್ದು;

(ಇ) 56ನೇ ಪ್ರಕರಣದಲ್ಲಿ,–

(i) "ನ್ಯಾಯಾಧಿಕರಣ" ಎಂಬ ಪದವು ಬರುವ ಕಡೆಗಳಲ್ಲಿ, ಅದರ ಬದಲಿಗೆ, "ಉಚ್ಚ ನ್ಯಾಯಾಲಯ" ಎಂಬ ಪದಗಳನ್ನು ಪ್ರತ್ಯಾಯೋಜಿಸತಕ್ಕದ್ದು;

(ii) (3)ನೇ ಉಪಪ್ರಕರಣವನ್ನು ಬಿಟ್ಟುಬಿಡತಕ್ಕದ್ದು;

(ಎಫ್) 57ನೇ ಪ್ರಕರಣದಲ್ಲಿ,–

(i) "ನ್ಯಾಯಾಧಿಕರಣ" ಎಂಬ ಪದವು ಬರುವ ಕಡೆಗಳಲ್ಲಿ, ಅದರ ಬದಲಿಗೆ, "ಉಚ್ಚ ನ್ಯಾಯಾಲಯ" ಎಂಬ ಪದಗಳನ್ನು ಪ್ರತ್ಯಾಯೋಜಿಸತಕ್ಕದ್ದು;

(ii) (5)ನೇ ಉಪಪ್ರಕರಣವನ್ನು ಬಿಟ್ಟುಬಿಡತಕ್ಕದ್ದು;

(ಜಿ) 58 ಮತ್ತು 59ನೇ ಪ್ರಕರಣವನ್ನು ಬಿಟ್ಟುಬಿಡತಕ್ಕದ್ದು;

(ಹೆಚ್) 89ನೇ ಪ್ರಕರಣದಲ್ಲಿ, "ಅಥವಾ ನ್ಯಾಯಾಧಿಕರಣ" ಎಂಬ ಪದಗಳನ್ನು ಬಿಟ್ಟುಬಿಡತಕ್ಕದ್ದು;

**ಅಧ್ಯಾಯ XIX**

**ರಾಷ್ಟ್ರೀಯ ಹೆದ್ದಾರಿಗಳ ನಿಯಂತ್ರಣ (ಭೂಮಿ ಮತ್ತು ಸಂಚಾರ) ಅಧಿನಿಯಮ, 2002ಕ್ಕೆ ತಿದ್ದುಪಡಿ**

**24. 2003ರ 13ನೇ ಅಧಿನಿಯಮದ ತಿದ್ದುಪಡಿ.–** ರಾಷ್ಟ್ರೀಯ ಹೆದ್ದಾರಿಗಳ ನಿಯಂತ್ರಣ (ಭೂಮಿ ಮತ್ತು ಸಂಚಾರ) ಅಧಿನಿಯಮ, 2002ರಲ್ಲಿ,–

(ಎ) 2ನೇ ಪ್ರಕರಣದಲ್ಲಿ,–

(i) (ಎ) ಖಂಡವನ್ನು ಬಿಟ್ಟುಬಿಡತಕ್ಕದ್ದು;

(ii) (ಡಿ) ಖಂಡದ ನಂತರ, ಈ ಮುಂದಿನ ಖಂಡವನ್ನು ಸೇರಿಸತಕ್ಕದ್ದು, ಎಂದರೆ:–

"(ಡಿಎ) "ನ್ಯಾಯಾಲಯ" ಎಂದರೆ, ಒಂದು ಜಿಲ್ಲೆಯಲ್ಲಿನ ಮೂಲ ಅಧಿಕಾರವ್ಯಾಪ್ತಿಯ ಪ್ರಧಾನ ಸಿವಿಲ್ ನ್ಯಾಯಾಲಯ ಮತ್ತು ಅದರ ಸಾಮಾನ್ಯ ಮೂಲ ಸಿವಿಲ್ ಅಧಿಕಾರವ್ಯಾಪ್ತಿಯನ್ನು ಚಲಾಯಿಸುವಲ್ಲಿ ಉಚ್ಚ ನ್ಯಾಯಾಲಯವನ್ನು ಒಳಗೊಳ್ಳುತ್ತದೆ;";

(iii) (ಎಲ್) ಖಂಡವನ್ನು ಬಿಟ್ಟುಬಿಡತಕ್ಕದ್ದು;

(ಬಿ) IIನೇ ಅಧ್ಯಾಯದಲ್ಲಿ, ಅಧ್ಯಾಯ ಶೀರ್ಷಿಕೆಯಲ್ಲಿ, "ಮತ್ತು ನ್ಯಾಯ ಮಂಡಳಿಗಳು, ಇತ್ಯಾದಿ" ಎಂಬ ಪದಗಳನ್ನು ಬಿಟ್ಟುಬಿಡತಕ್ಕದ್ದು;

(ಸಿ) (5)ನೇ ಉಪಪ್ರಕರಣವನ್ನು ಬಿಟ್ಟುಬಿಡತಕ್ಕದ್ದು;

(ಡಿ) 14ನೇ ಪ್ರಕರಣದ ಬದಲಿಗೆ, ಈ ಮುಂದಿನ ಪ್ರಕರಣವನ್ನು ಪ್ರತ್ಯಾಯೋಜಿಸತಕ್ಕದ್ದು, ಎಂದರೆ:–

"14. ಸಂದರ್ಭಾನುಸಾರ, ಹೆದ್ದಾರಿ ಆಡಳಿತವು ಅಥವಾ ಅದರ ಪರವಾಗಿ ಅಧಿಕೃತನಾದ ಯಾರೇ ಅಧಿಕಾರಿಯು, 26, 27, 28, 36, 37 ಮತ್ತು 38ನೇ ಪ್ರಕರಣದ ಮೇರೆಗೆ ನೋಟೀಸುಗಳನ್ನು ಹೊರಡಿಸುವುದನ್ನು ಅಥವಾ ಜಾರಿ ಮಾಡುವುದನ್ನು ಹೊರತುಪಡಿಸಿ, ಹೊರಡಿಸಿದ ಯಾವುದೇ ಆದೇಶ, ತೆಗೆದುಕೊಂಡ ಯಾವುದೇ ಕ್ರಮದ ವಿರುದ್ಧದ ಅಪೀಲನ್ನು ನ್ಯಾಯಾಲಯದಲ್ಲಿ ಹೂಡತಕ್ಕದ್ದು.";

(ಇ) 15 ಮತ್ತು 16ನೇ ಪ್ರಕರಣಗಳನ್ನು ಬಿಟ್ಟುಬಿಡತಕ್ಕದ್ದು;

(ಎಫ್) 17ನೇ ಪ್ರಕರಣದಲ್ಲಿ, "ನ್ಯಾಯಾಧಿಕರಣ" ಎಂಬ ಪದವು ಬಳಕೆಯಾಗಿರುವ ಎರಡೂ ಕಡೆಗಳಲ್ಲಿ, ಅದರ ಬದಲಿಗೆ, "ನ್ಯಾಯಾಲಯ" ಎಂಬ ಪದವನ್ನು ಪ್ರತ್ಯಾಯೋಜಿಸತಕ್ಕದ್ದು;

(ಜಿ) 18ನೇ ಪ್ರಕರಣವನ್ನು ಬಿಟ್ಟುಬಿಡತಕ್ಕದ್ದು;

(ಹೆಚ್) 19ನೇ ಪ್ರಕರಣದಲ್ಲಿ, "ನ್ಯಾಯಾಧಿಕರಣ" ಎಂಬ ಪದವು ಬಳಕೆಯಾಗಿರುವ ಎರಡೂ ಕಡೆಗಳಲ್ಲಿ, ಅದರ ಬದಲಿಗೆ, "ನ್ಯಾಯಾಲಯ" ಎಂಬ ಪದವನ್ನು ಪ್ರತ್ಯಾಯೋಜಿಸತಕ್ಕದ್ದು;

(ಐ) 40ನೇ ಪ್ರಕರಣವನ್ನು ಬಿಟ್ಟುಬಿಡತಕ್ಕದ್ದು;

(ಜೆ) 41ನೇ ಪ್ರಕರಣದಲ್ಲಿ,–

(i) "ಅಥವಾ ಮೇಲ್ಮನವಿಯ ಬಗ್ಗೆ ನ್ಯಾಯಾಧಿಕರಣವು ಈ ಅಧಿನಿಯಮದ ಮೇರೆಗೆ ಹೊರಡಿಸಿದ ಪ್ರತಿ ಆದೇಶ ಅಥವಾ ಕೈಗೊಂಡ ಪ್ರತೀ ತೀರ್ಮಾನ" ಎಂಬ ಪದಗಳನ್ನು ಬಿಟ್ಟುಬಿಡತಕ್ಕದ್ದು;

(ii) "ಅಥವಾ ನ್ಯಾಯಾಧಿಕರಣ" ಎಂಬ ಪದಗಳನ್ನು ಬಿಟ್ಟುಬಿಡತಕ್ಕದ್ದು;

(ಕೆ) 50ನೇ ಪ್ರಕರಣದಲ್ಲಿ, (2)ನೇ ಉಪಪ್ರಕರಣದಲ್ಲಿ, (ಎಫ್) ಖಂಡವನ್ನು ಬಿಟ್ಟುಬಿಡತಕ್ಕದ್ದು.

**ಅಧ್ಯಾಯ XX**

**ವಿದ್ಯುಚ್ಛಕ್ತಿ ಅಧಿನಿಯಮ, 2003ಕ್ಕೆ ತಿದ್ದುಪಡಿ**

**25. 2003ರ 36ನೇ ಅಧಿನಿಯಮದ ತಿದ್ದುಪಡಿ.–** ವಿದ್ಯುಚ್ಛಕ್ತಿ ಅಧಿನಿಯಮ, 2003ರ 117ಎ ಪ್ರಕರಣದಲ್ಲಿ, "ಹಣಕಾಸು ಅಧಿನಿಯಮ, 2017 (2017ರ 7)ರ VIನೇ ಅಧ್ಯಾಯದ XIVನೇ ಭಾಗವು, ಆ ಅಧಿನಿಯಮದ 184ನೇ ಪ್ರಕರಣದ ಉಪಬಂಧಗಳಿಂದ ನಿಯಂತ್ರಿಸಲ್ಪಡತಕ್ಕದ್ದು" ಎಂಬ ಪದಗಳು ಮತ್ತು ಅಂಕಿಗಳ ಬದಲಿಗೆ, "ನ್ಯಾಯಾಧಿಕರಣಗಳ ಸುಧಾರಣಾ ಅಧಿನಿಯಮ, 2021 ಇದು, ಸದರಿ ಅಧಿನಿಯಮದ IIನೇ ಅಧ್ಯಾಯದ ಉಪಬಂಧಗಳಿಂದ ನಿಯಂತ್ರಿಸಲ್ಪಡತಕ್ಕದ್ದು" ಎಂಬ ಪದಗಳು ಮತ್ತು ಅಂಕಿಗಳನ್ನು ಪ್ರತ್ಯಾಯೋಜಿಸತಕ್ಕದ್ದು.

**ಅಧ್ಯಾಯ XXI**

**ಸಶಸ್ತ್ರ ಪಡೆ ನ್ಯಾಯಾಧಿಕರಣ ಅಧಿನಿಯಮ, 2007ಕ್ಕೆ ತಿದ್ದುಪಡಿ**

**26. 2007ರ 55ನೇ ಅಧಿನಿಯಮದ ತಿದ್ದುಪಡಿ.–** ಸಶಸ್ತ್ರ ಪಡೆ ನ್ಯಾಯಾಧಿಕರಣ ಅಧಿನಿಯಮ, 2007ರ 9ಎ ಪ್ರಕರಣದಲ್ಲಿ, "ಹಣಕಾಸು ಅಧಿನಿಯಮ, 2017ರ (2017ರ 7) VIನೇ ಅಧ್ಯಾಯದ XIVನೇ ಭಾಗವು, ಆ ಅಧಿನಿಯಮದ 184ನೇ ಪ್ರಕರಣದ ಉಪಬಂಧಗಳಿಂದ ನಿಯಂತ್ರಿಸಲ್ಪಡತಕ್ಕದ್ದು" ಎಂಬ ಪದಗಳು ಮತ್ತು ಅಂಕಿಗಳ ಬದಲಿಗೆ, "ನ್ಯಾಯಾಧಿಕರಣಗಳ ಸುಧಾರಣಾ ಅಧಿನಿಯಮ, 2021, ಇದು, ಸದರಿ ಅಧಿನಿಯಮದ IIನೇ ಅಧ್ಯಾಯದ ಉಪಬಂಧಗಳಿಂದ ನಿಯಂತ್ರಿಸಲ್ಪಡತಕ್ಕದ್ದು" ಎಂಬ ಪದಗಳು ಮತ್ತು ಅಂಕಿಗಳನ್ನು ಪ್ರತ್ಯಾಯೋಜಿಸತಕ್ಕದ್ದು.

**ಅಧ್ಯಾಯ XXII**

**ರಾಷ್ಟ್ರೀಯ ಹಸಿರು ನ್ಯಾಯಾಧಿಕರಣ ಅಧಿನಿಯಮ, 2010ಕ್ಕೆ ತಿದ್ದುಪಡಿ**

**27. 2010ರ 19ನೇ ಅಧಿನಿಯಮದ ತಿದ್ದುಪಡಿ.–** ರಾಷ್ಟ್ರೀಯ ಹಸಿರು ನ್ಯಾಯಾಧಿಕರಣ ಅಧಿನಿಯಮ, 2010ರ 10ಎ ಪ್ರಕರಣದಲ್ಲಿ, "ಹಣಕಾಸು ಅಧಿನಿಯಮ, 2017ರ (2017ರ 7) VIನೇ ಅಧ್ಯಾಯದ XIVನೇ ಭಾಗವು, ಆ ಅಧಿನಿಯಮದ 184ನೇ ಪ್ರಕರಣದ ಉಪಬಂಧಗಳಿಂದ ನಿಯಂತ್ರಿಸಲ್ಪಡತಕ್ಕದ್ದು" ಎಂಬ ಪದಗಳು ಮತ್ತು ಅಂಕಿಗಳ ಬದಲಿಗೆ, "ನ್ಯಾಯಾಧಿಕರಣಗಳ ಸುಧಾರಣಾ ಅಧಿನಿಯಮ, 2021 ಇದು, ಸದರಿ ಅಧಿನಿಯಮದ IIನೇ ಅಧ್ಯಾಯದ ಉಪಬಂಧಗಳಿಂದ ನಿಯಂತ್ರಿಸಲ್ಪಡತಕ್ಕದ್ದು" ಎಂಬ ಪದಗಳು ಮತ್ತು ಅಂಕಿಗಳನ್ನು ಪ್ರತ್ಯಾಯೋಜಿಸತಕ್ಕದ್ದು.

**ಅಧ್ಯಾಯ XXIII**

**ಕಂಪನಿಗಳ ಅಧಿನಿಯಮ, 2010ಕ್ಕೆ ತಿದ್ದುಪಡಿ**

**28. 2013ರ 18ನೇ ಅಧಿನಿಯಮದ ತಿದ್ದುಪಡಿ.–** ಕಂಪನಿಗಳ ಅಧಿನಿಯಮ, 2010ರ 417ಎ ಪ್ರಕರಣದಲ್ಲಿ, "ಹಣಕಾಸು ಅಧಿನಿಯಮ, 2017ರ (2017ರ 7) VIನೇ ಅಧ್ಯಾಯದ XIVನೇ ಭಾಗವು, ಆ ಅಧಿನಿಯಮದ 184ನೇ ಪ್ರಕರಣದ ಉಪಬಂಧಗಳಿಂದ ನಿಯಂತ್ರಿಸಲ್ಪಡತಕ್ಕದ್ದು" ಎಂಬ ಪದಗಳು ಮತ್ತು ಅಂಕಿಗಳ ಬದಲಿಗೆ, "ನ್ಯಾಯಾಧಿಕರಣಗಳ ಸುಧಾರಣಾ ಅಧಿನಿಯಮ, 2021 ಇದು, ಸದರಿ ಅಧಿನಿಯಮದ IIನೇ ಅಧ್ಯಾಯದ ಉಪಬಂಧಗಳಿಂದ ನಿಯಂತ್ರಿಸಲ್ಪಡತಕ್ಕದ್ದು" ಎಂಬ ಪದಗಳು ಮತ್ತು ಅಂಕಿಗಳನ್ನು ಪ್ರತ್ಯಾಯೋಜಿಸತಕ್ಕದ್ದು.

## ಅಧ್ಯಾಯ XXIV

### ಹಣಕಾಸು ಅಧಿನಿಯಮ, 2017ಕ್ಕೆ ತಿದ್ದುಪಡಿ

**29. 2017ರ 7ನೇ ಅಧಿನಿಯಮದ ತಿದ್ದುಪಡಿ.–** ಹಣಕಾಸು ಅಧಿನಿಯಮ, 2017ರ 183 ಮತ್ತು 184ನೇ ಪ್ರಕರಣವನ್ನು ಮತ್ತು ಎಂಟನೇ ಅನುಸೂಚಿಯನ್ನು ಬಿಟ್ಟುಬಿಡತಕ್ಕದ್ದು.

## ಅಧ್ಯಾಯ XXV

### ಗ್ರಾಹಕ ಸಂರಕ್ಷಣಾ ಅಧಿನಿಯಮ, 2019ಕ್ಕೆ ತಿದ್ದುಪಡಿ

**30. 2019ರ 35ನೇ ಅಧಿನಿಯಮದ ತಿದ್ದುಪಡಿ.–** ಗ್ರಾಹಕ ಸಂರಕ್ಷಣಾ ಅಧಿನಿಯಮ, 2019ರ 55ನೇ ಪ್ರಕರಣದ (1)ನೇ ಉಪಪ್ರಕರಣದ ನಂತರ, ಈ ಮುಂದಿನ ಉಪಪ್ರಕರಣವನ್ನು ಸೇರಿಸತಕ್ಕದ್ದು, ಎಂದರೆ:–

"(1ಎ) (1)ನೇ ಉಪಪ್ರಕರಣದಲ್ಲಿ ಏನೇ ಒಳಗೊಂಡಿದ್ದಾಗ್ಯೂ, ನ್ಯಾಯಾಧಿಕರಣ ಸುಧಾರಣಾ ಅಧಿನಿಯಮ, 2021 ಜಾರಿಯಾದ ನಂತರ ನೇಮಕಗೊಳ್ಳುವ, ರಾಷ್ಟ್ರೀಯ ಆಯೋಗದ ಅಧ್ಯಕ್ಷ ಮತ್ತು ಇತರ ಸದಸ್ಯರ ಅರ್ಹತೆಗಳು, ನೇಮಕಾತಿ, ಪದಾವಧಿ, ಸಂಬಳಗಳು ಮತ್ತು ಭತ್ಯೆಗಳು, ರಾಜೀನಾಮೆ, ತೆಗೆದುಹಾಕುವಿಕೆ ಮತ್ತು ಇತರ ಸೇವಾ ನಿಬಂಧನೆಗಳು ಮತ್ತು ಷರತ್ತುಗಳು, ಸದರಿ ಅಧಿನಿಯಮದ ಉಪಬಂಧಗಳಿಂದ ನಿಯಂತ್ರಿಸಲ್ಪಡತಕ್ಕದ್ದು.".

## ಅಧ್ಯಾಯ XXVI

### ಸಂಕೀರ್ಣ

**31. ಅನುಸೂಚಿಯನ್ನು ತಿದ್ದುಪಡಿ ಮಾಡಲು ಅಧಿಕಾರ.–** (1) ಕೇಂದ್ರ ಸರ್ಕಾರವು, ಅನುಸೂಚಿಯನ್ನು ತಿದ್ದುಪಡಿ ಮಾಡುವುದು ಅವಶ್ಯಕ ಅಥವಾ ವಿಹಿತ ಎಂದು ಮನಗಂಡರೆ, ಸರ್ಕಾರಿ ರಾಜಪತ್ರದಲ್ಲಿ ಪ್ರಕಟಿಸಿದ ಅಧಿಸೂಚನೆಯ ಮೂಲಕ ಅನುಸೂಚಿಯನ್ನು ತಿದ್ದುಪಡಿ ಮಾಡಬಹುದು ಮತ್ತು ತದನುಸಾರವಾಗಿ ಸದರಿ ಅನುಸೂಚಿಯನ್ನು ತಿದ್ದುಪಡಿ ಮಾಡಲಾಗಿದೆ ಎಂದು ಭಾವಿಸತಕ್ಕದ್ದು.

(2) ಉಪಪ್ರಕರಣ (1)ರ ಮೇರೆಗೆ ಹೊರಡಿಸಿದ ಪ್ರತಿಯೊಂದು ಅಧಿಸೂಚನೆಯ ಪ್ರತಿಯನ್ನು, ಅದನ್ನು ಹೊರಡಿಸಿದ ತರುವಾಯ ಸಾಧ್ಯವಾದಷ್ಟು ಬೇಗನೇ ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಮಂಡಿಸತಕ್ಕದ್ದು.

**32. ಸಂಸತ್ತಿನ ಮುಂದೆ ನಿಯಮಗಳನ್ನು ಇಡುವುದು.–** ಈ ಅಧಿನಿಯಮದ ಅಡಿಯಲ್ಲಿ ರಚಿಸಿದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ ಸಾಧ್ಯವಾದಷ್ಟು ಬೇಗನೆ, ಸಂಸತ್ತಿನ ಪ್ರತಿಯೊಂದು ಸದನದ ಮುಂದೆ, ಒಂದು ಅಧಿವೇಶನದಲ್ಲಿ ಅಥವಾ ಒಂದಾದ ಮೇಲೊಂದರಂತೆ ಅನುಕ್ರಮವಾಗಿ ಬರುವ ಎರಡು ಅಥವಾ ಹೆಚ್ಚು ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿವಸಗಳ ಅವಧಿಯವರೆಗೆ ಇಡತಕ್ಕದ್ದು ಮತ್ತು ಮೇಲೆ ಹೇಳಿದ ಅಧಿವೇಶನವು ಅಥವಾ ಒಂದಾದ ಮೇಲೊಂದರಂತೆ ಅನುಕ್ರಮವಾಗಿ ಬರುವ ಅಧಿವೇಶನಗಳ ನಿಕಟೋತ್ತರ ಅಧಿವೇಶನವು ಮುಕ್ತಾಯಗೊಳ್ಳುವುದಕ್ಕೆ ಮುಂಚೆ ಆ ನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ ಅಥವಾ ಆ ನಿಯಮವನ್ನು ರಚಿಸಕೂಡದೆಂದು ಎರಡೂ ಸದನಗಳು ಒಪ್ಪಿದರೆ, ಆ ತರುವಾಯ ಆ ನಿಯಮವು ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಸಂದರ್ಭಾನುಸಾರ, ಪರಿಣಾಮಕಾರಿಯಾಗತಕ್ಕದ್ದಲ್ಲ. ಆದಾಗ್ಯೂ, ಅಂಥ ಯಾವುದೇ ಮಾರ್ಪಾಟು ಅಥವಾ ರದ್ದತಿಯೂ ಆ ನಿಯಮದ ಮೇರೆಗೆ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವನ್ನುಂಟುಮಾಡತಕ್ಕದ್ದಲ್ಲ.

**33. ತಾತ್ಕಾಲಿಕ ಉಪಬಂಧಗಳು.–** (1) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನಲ್ಲಿ ಏನೇ ಒಳಗೊಂಡಿದ್ದಾಗ್ಯೂ, ಎರಡನೇ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಲಾದ ನ್ಯಾಯಾಧಿಕರಣ, ಅಪೀಲು ನ್ಯಾಯಾಧಿಕರಣ, ಅಥವಾ ಸಂದರ್ಭಾನುಸಾರ, ಇತರ

ಪ್ರಾಧಿಕಾರಗಳ ಅಧ್ಯಕ್ಷ ಅಥವಾ ಚೇರ್‌ಮನ್ ಅಥವಾ ಪ್ರೆಸಿಡೆಂಟ್ ಅಥವಾ ಪ್ರಿಸೈಡಿಂಗ್ ಅಧಿಕಾರಿ ಅಥವಾ ಉಪಾಧ್ಯಕ್ಷ ಅಥವಾ ವೈಸ್ ಚೇರ್‌ಮನ್ ಅಥವಾ ವೈಸ್‌ಪ್ರೆಸಿಡೆಂಟ್ ಅಥವಾ ಸದಸ್ಯನಾಗಿ ನೇಮಕಗೊಂಡ ಮತ್ತು ಅಧಿಸೂಚಿತ ದಿನಾಂಕಕ್ಕಿಂತ ನಿಕಟಪೂರ್ವದಲ್ಲಿ ಹಾಗೆ ಪದದಲ್ಲಿರುವ ಯಾರೇ ವ್ಯಕ್ತಿಯು, ಅಧಿಸೂಚಿತ ದಿನಾಂಕದಂದು ಮತ್ತು ದಿನಾಂಕದಿಂದ, ಆ ಪದದಲ್ಲಿರುವುದು ಕೊನೆಗೊಳ್ಳತಕ್ಕದ್ದು, ಮತ್ತು ಅವನ ಪದಾವಧಿಯ ಅಥವಾ ಯಾವುದೇ ಸೇವಾ ಕರಾರಿನ ಅವಧಿ ಪೂರ್ವಸಮಾಪ್ತಿಗಾಗಿ ಮೂರು ತಿಂಗಳಿಗೆ ಮೀರದ ವೇತನ ಮತ್ತು ಭತ್ಯೆಗಳ ಪರಿಹಾರವನ್ನು ಕ್ಲೇಮು ಮಾಡುವುದಕ್ಕೆ ಅವನು ಹಕ್ಕುಳ್ಳವನಾಗಿರತಕ್ಕದ್ದು.

(2) ಅಧಿಸೂಚಿತ ದಿನಾಂಕಕ್ಕಿಂತ ಮೊದಲು, ನಿಯೋಜನೆ ಮೇಲೆ ನೇಮಕಗೊಂಡ, ಎರಡನೇ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಲಾದ ನ್ಯಾಯಾಧಿಕರಣಗಳು, ಅಪೀಲು ನ್ಯಾಯಾಧಿಕರಣಗಳು ಮತ್ತು ಇತರ ಪ್ರಾಧಿಕಾರಗಳ ಅಧಿಕಾರಿಗಳು ಮತ್ತು ಇತರ ನೌಕರರು, ಅಧಿಸೂಚಿತ ದಿನಾಂಕದಂದು ಮತ್ತು ದಿನಾಂಕದಿಂದ, ಅವರ ಮಾತೃ ವೃಂದಕ್ಕೆ, ಮಂತ್ರಾಲಯಕ್ಕೆ ಅಥವಾ ಇಲಾಖೆಗೆ ಕೂಡಲೇ ಹಿಂದಿರುಗತಕ್ಕದ್ದು.

(3) ಅಧಿಸೂಚಿತ ದಿನಾಂಕಕ್ಕಿಂತ ಮೊದಲು, ಎರಡನೇ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಲಾದ ನ್ಯಾಯಾಧಿಕರಣ, ಅಪೀಲು ನ್ಯಾಯಾಧಿಕರಣ ಮತ್ತು ಇತರ ಪ್ರಾಧಿಕಾರಗಳ ಮುಂದೆ ಬಾಕಿಯಿರುವ ಯಾವುದೇ ಅಪೀಲು, ಅರ್ಜಿ ಅಥವಾ ವ್ಯವಹರಣೆಯು, ಆದಾಯ ತೆರಿಗೆ ಅಧಿನಿಯಮ, 1961 (1961ರ 43) ರ ಮೇರೆಗೆ ಮುಂಚಿತ ತೀರ್ಮಾನಗಳಿಗಾಗಿ ಪ್ರಾಧಿಕಾರದ ಮುಂದೆ ಬಾಕಿಯಿರುವಂಥವುಗಳನ್ನು ಹೊರತುಪಡಿಸಿ, ಅಂಥ ಅಪೀಲು ಅಥವಾ ಅರ್ಜಿಯನ್ನು ಸಲ್ಲಿಸುವ ದಿನಾಂಕದಂದು ಅಥವಾ ವ್ಯವಹರಣೆಯ ಪ್ರಾರಂಭದ ದಿನಾಂಕದಂದು ಈ ಅಧಿನಿಯಮವು ಜಾರಿಯಲ್ಲಿದ್ದರೆ, ಅದನ್ನು ಯಾವ ನ್ಯಾಯಾಲಯದ ಮುಂದೆ ಸಲ್ಲಿಸಬಹುದಾಗಿತ್ತೋ ಆ ನ್ಯಾಯಾಲಯಕ್ಕೆ ವರ್ಗಾವಣೆಯಾಗತಕ್ಕದ್ದು ಮತ್ತು ನ್ಯಾಯಾಲಯವು, ತಾನು ಸೂಕ್ತವೆಂದು ಭಾವಿಸಿದಂಥ ಪ್ರಕರಣಗಳನ್ನು ಅವು ಅಂಥ ವರ್ಗಾವಣೆಗೆ ಪೂರ್ವದಲ್ಲಿದ್ದ ಹಂತದಿಂದ ಅಥವಾ ಯಾವುದೇ ಮುಂಚಿನ ಹಂತದಿಂದ ಅಥವಾ ಪುನಃ ಹೊಸದಾಗಿ ವ್ಯವಹರಣೆಯನ್ನು ಪ್ರಾರಂಭಿಸಬಹುದು.

(4) ಎರಡನೇ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಲಾದ ನ್ಯಾಯಾಧಿಕರಣ, ಅಪೀಲು ನ್ಯಾಯಾಧಿಕರಣ ಮತ್ತು ಇತರ ಪ್ರಾಧಿಕಾರಗಳಿಂದ ಸ್ವೀಕೃತವಾದ ಅಥವಾ ಅವುಗಳಿಗೆ ಮುಂಗಡವಾಗಿ ನೀಡಲಾದ ಮತ್ತು ಖರ್ಚು ಮಾಡದೆ ಉಳಿದಿರುವ ಎಲ್ಲಾ ಹಣದ ಮೊಬಲಗುಗಳ ಶಿಲ್ಕನ್ನು, ಅಧಿಸೂಚಿತ ದಿನಾಂಕದಂದು ಮತ್ತು ದಿನಾಂಕದಿಂದ ಕೂಡಲೇ ಕೇಂದ್ರ ಸರ್ಕಾರಕ್ಕೆ ವರ್ಗಾಯಿಸತಕ್ಕದ್ದು.

(5) ಅಧಿಸೂಚಿತ ದಿನಾಂಕಕ್ಕೆ ಮುಂಚೆ, ಎರಡನೇ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಲಾದ ನ್ಯಾಯಾಧಿಕರಣ, ಅಪೀಲು ನ್ಯಾಯಾಧಿಕರಣ ಮತ್ತು ಇತರ ಪ್ರಾಧಿಕಾರಗಳ ಒಡೆತನದಲ್ಲಿರುವ ಅಥವಾ ಅವುಗಳಲ್ಲಿ ನಿಹಿತವಾದ ಯಾವುದೇ ಬಗೆಯ ಎಲ್ಲಾ ಸ್ವತ್ತನ್ನು, ಅಧಿಸೂಚಿತ ದಿನಾಂಕದಂದು ಮತ್ತು ದಿನಾಂಕದಿಂದ ಕೂಡಲೇ ಕೇಂದ್ರ ಸರ್ಕಾರಕ್ಕೆ ವರ್ಗಾಯಿಸತಕ್ಕದ್ದು ಮತ್ತು ಕೇಂದ್ರ ಸರ್ಕಾರದಲ್ಲಿ ನಿಹಿತವಾಗತಕ್ಕದ್ದು.

**34. ತೊಂದರೆಗಳನ್ನು ನಿವಾರಿಸಲು ಅಧಿಕಾರ.–** (1) ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೊಳಿಸುವಲ್ಲಿ ಯಾವುದೇ ತೊಂದರೆ ಉದ್ಭವಿಸಿದರೆ, ಕೇಂದ್ರ ಸರ್ಕಾರವು, ಸರ್ಕಾರಿ ರಾಜಪತ್ರದಲ್ಲಿ ಪ್ರಕಟಿಸಿದ ಆದೇಶದ ಮೂಲಕ, ಅಂಥ ತೊಂದರೆ ನಿವಾರಿಸಲು ತನಗೆ ಅವಶ್ಯ ಅಥವಾ ವಿಹಿತ ಎಂದು ಕಂಡುಬರಬಹುದಾದಂಥ ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಾಗಿರದಂಥ ಉಪಬಂಧಗಳನ್ನು ರಚಿಸಬಹುದು:

ಪರಂತು, ಅಧಿಸೂಚಿತ ದಿನಾಂಕದಿಂದ ಮೂರು ವರ್ಷಗಳ ಅವಧಿಯು ಮುಕ್ತಾಯವಾದ ತರುವಾಯ ಅಂಥ ಯಾವುದೇ ಆದೇಶವನ್ನು ಮಾಡತಕ್ಕದ್ದಲ್ಲ.

(2) ಈ ಪ್ರಕರಣದ ಮೇರೆಗೆ ಮಾಡಿದ ಪ್ರತಿಯೊಂದು ಆದೇಶವನ್ನು, ಅದನ್ನು ಮಾಡಿದ ತರುವಾಯ ಸಾಧ್ಯವಾದಷ್ಟು ಬೇಗನೆ ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಇಡತಕ್ಕದ್ದು.

**35. ನಿರಸನ ಮತ್ತು ಉಳಿಸುವಿಕೆಗಳು.–** (1) ನ್ಯಾಯಾಧಿಕರಣಗಳ ಸುಧಾರಣಾ (ಸುವ್ಯವಸ್ಥೀಕರಣ ಮತ್ತು ಸೇವಾ ಷರತ್ತುಗಳು) ಅಧ್ಯಾದೇಶ, 2021ನ್ನು ಈ ಮೂಲಕ ನಿರಸನಗೊಳಿಸಲಾಗಿದೆ.

(2) ಅಂಥ ನಿರಸನ ಏನೇ ಇದ್ದರೂ, ಸದರಿ ಅಧ್ಯಾದೇಶದ ಮೂಲಕ ತಿದ್ದುಪಡಿಯಾದಂತೆ, ಚಲನಚಿತ್ರ ಅಧಿನಿಯಮ, 1952 (1952ರ 37), ಕೃತಿಸ್ವಾಮ್ಯ ಅಧಿನಿಯಮ, 1957 (1957ರ 14), ಸೀಮಾಸುಂಕ ಅಧಿನಿಯಮ, 1962(1962ರ 52), ಪೇಟೆಂಟ್‌ಗಳ ಅಧಿನಿಯಮ, 1970 (1970ರ 39), ಭಾರತ ವಿಮಾನ ನಿಲ್ದಾಣಗಳ ಪ್ರಾಧಿಕಾರ ಅಧಿನಿಯಮ, 1994 (1994ರ 55), ವ್ಯಾಪಾರ ಅಧಿನಿಯಮ, 1999 (1999ರ 47), ಸರಕುಗಳ ಭೌಗೋಳಿಕ ಸಂಕೇತಗಳ (ನೋಂದಣಿ ಮತ್ತು ರಕ್ಷಣೆ) ಅಧಿನಿಯಮ, 1999 (1999ರ 48), ಸಸ್ಯ ಪ್ರಭೇದಗಳು ಮತ್ತು ರೈತರ ಹಕ್ಕುಗಳ ಸಂರಕ್ಷಣಾ ಅಧಿನಿಯಮ, 2001 (2001ರ 53), ರಾಷ್ಟ್ರೀಯ ಹೆದ್ದಾರಿಗಳ ನಿಯಂತ್ರಣ (ಭೂಮಿ ಮತ್ತು ಸಂಚಾರ) ಅಧಿನಿಯಮ, 2002 (2002ರ 13), ಈ ಅಧಿನಿಯಮಗಳ ಮೇರೆಗೆ ಮಾಡಿದ ಯಾವುದೇ ಕಾರ್ಯವನ್ನು ಅಥವಾ ಕೈಗೊಂಡ ಯಾವುದೇ ಕ್ರಮವನ್ನು, ಈ ಅಧಿನಿಯಮದ ಮೂಲಕ ತಿದ್ದುಪಡಿಮಾಡಲಾದಂತೆ, ಈ ಅಧಿನಿಯಮದ ಸಂವಾದಿ ಉಪಬಂಧಗಳ ಮೇರೆಗೆ ಮಾಡಲಾಗಿದೆ ಅಥವಾ ಕೈಗೊಳ್ಳಲಾಗಿದೆಯೆಂದು ಭಾವಿಸತಕ್ಕದ್ದು.

**ಮೊದಲನೇ ಅನುಸೂಚಿ**

[ಪ್ರಕರಣ 2(ಇ)ನ್ನು ನೋಡಿ]

| ಕ್ರ.ಸಂ. | **ನ್ಯಾಯಾಧಿಕರಣ/ಅಪೀಲು ನ್ಯಾಯಾಧಿಕರಣ/ಮಂಡಳಿ/ಪ್ರಾಧಿಕಾರ** | **ಅಧಿನಿಯಮಗಳು** |
|---|---|---|
| **(1)** | **(2)** | **(3)** |
| 1. | ಕೇಂದ್ರ ಸರ್ಕಾರದಿಂದ ರಚಿತವಾದ ಕೈಗಾರಿಕಾ ನ್ಯಾಯಾಧಿಕರಣ | ಕೈಗಾರಿಕಾ ವಿವಾದಗಳ ಅಧಿನಿಯಮ, 1947 (1947ರ 14) |
| 2. | ಆದಾಯ ತೆರಿಗೆ ಅಪೀಲು ನ್ಯಾಯಾಧಿಕರಣ | ಆದಾಯ ತೆರಿಗೆ ಅಧಿನಿಯಮ, 1961 (1961ರ 43) |
| 3. | ಸೀಮಾಸುಂಕ, ಅಬಕಾರಿ ಮತ್ತು ಸೇವಾ ತೆರಿಗೆ ಅಪೀಲು ನ್ಯಾಯಾಧಿಕರಣ | ಸೀಮಾಸುಂಕ ಅಧಿನಿಯಮ, 1962 (1962ರ 52) |
| 4. | ಅಪೀಲು ನ್ಯಾಯಾಧಿಕರಣ | ಕಳ್ಳಸಾಗಣೆದಾರರ ಮತ್ತು ವಿದೇಶಿ ವಿನಿಮಯ ಕೈಚಳಕದಾರರ (ಸ್ವತ್ತಿನ ಮುಟ್ಟುಗೋಲು) ಅಧಿನಿಯಮ, 1976 (1976ರ 13) |
| 5. | ಕೇಂದ್ರ ಆಡಳಿತ ನ್ಯಾಯಾಧಿಕರಣ | ಆಡಳಿತ ನ್ಯಾಯಾಧಿಕರಣಗಳ ಅಧಿನಿಯಮ, 1985 (1985ರ 13) |
| 6. | ರಾಜ್ಯ ಆಡಳಿತ ನ್ಯಾಯಾಧಿಕರಣ | ಆಡಳಿತ ನ್ಯಾಯಾಧಿಕರಣಗಳ ಅಧಿನಿಯಮ, 1985 (1985ರ 13) |
| 7. | ರೈಲ್ವೇ ಕ್ಲೇಮುಗಳ ನ್ಯಾಯಾಧಿಕರಣ | ರೈಲ್ವೇ ಕ್ಲೇಮುಗಳ ನ್ಯಾಯಾಧಿಕರಣ ಅಧಿನಿಯಮ, 1987 (1987ರ 54) |
| 8. | ಭದ್ರತೆಗಳ ಅಪೀಲು ನ್ಯಾಯಾಧಿಕರಣ | ಭಾರತೀಯ ಭದ್ರತೆಗಳು ಮತ್ತು ವಿನಿಮಯ ಮಂಡಲಿ ಅಧಿನಿಯಮ, 1992 (1992ರ 15) |

| | | |
|---|---|---|
| 9. | ಸಾಲ ವಸೂಲಾತಿ ನ್ಯಾಯಾಧಿಕರಣ | ಸಾಲ ವಸೂಲಾತಿ ಮತ್ತು ದಿವಾಳಿತನ ಅಧಿನಿಯಮ, 1993 (1993ರ 51) |
| 10. | ಸಾಲ ವಸೂಲಾತಿ ಅಪೀಲು ನ್ಯಾಯಾಧಿಕರಣ | ಸಾಲ ವಸೂಲಾತಿ ಮತ್ತು ದಿವಾಳಿತನ ಅಧಿನಿಯಮ, 1993 (1993ರ 51) |
| 11. | ಟೆಲಿಕಾಂ ವಿವಾದಗಳ ಇತ್ಯರ್ಥ ಮತ್ತು ಅಪೀಲು ನ್ಯಾಯಾಧಿಕರಣ | ಭಾರತ ಟೆಲಿಕಾಂ ನಿಯಂತ್ರಣ ಪ್ರಾಧಿಕಾರ ಅಧಿನಿಯಮ, 1997 (1997ರ 24) |
| 12. | ರಾಷ್ಟ್ರೀಯ ಕಂಪನಿ ಕಾನೂನು ಅಪೀಲು ನ್ಯಾಯಾಧಿಕರಣ | ಕಂಪನಿಗಳ ಅಧಿನಿಯಮ, 2013 (2013ರ 18) |
| 13. | ರಾಷ್ಟ್ರೀಯ ಗ್ರಾಹಕ ವಿವಾದಗಳ ಪರಿಹಾರ ಆಯೋಗ | ಗ್ರಾಹಕ ಸಂರಕ್ಷಣಾ ಅಧಿನಿಯಮ, 2019 (2019ರ 35) |
| 14. | ವಿದ್ಯುಚ್ಛಕ್ತಿ ಅಪೀಲು ನ್ಯಾಯಾಧಿಕರಣ | ವಿದ್ಯುಚ್ಛಕ್ತಿ ಅಧಿನಿಯಮ, 2003 (2003ರ 36) |
| 15. | ಸಶಸ್ತ್ರ ಪಡೆಗಳ ನ್ಯಾಯಾಧಿಕರಣ | ಸಶಸ್ತ್ರ ಪಡೆಗಳ ಅಧಿನಿಯಮ, 2007 (2007ರ 55) |
| 16. | ರಾಷ್ಟ್ರೀಯ ಹಸಿರು ನ್ಯಾಯಾಧಿಕರಣ | ರಾಷ್ಟ್ರೀಯ ಹಸಿರು ನ್ಯಾಯಾಧಿಕರಣ ಅಧಿನಿಯಮ, 2010 (2010ರ 19) |

## ಎರಡನೇ ಅನುಸೂಚಿ

**[33ನೇ ಪ್ರಕರಣವನ್ನು ನೋಡಿ]**

1. ಚಲನಚಿತ್ರ ಅಧಿನಿಯಮ, 1952 (1952ರ 37)ರ ಮೇರೆಗೆ ಅಪೀಲು ನ್ಯಾಯಾಧಿಕರಣ.

2. ಆದಾಯ ತೆರಿಗೆ ಅಧಿನಿಯಮ, 1961 (1961ರ 43)ರ ಮೇರೆಗೆ ಮುಂಚಿತ ನಿರ್ಣಯ ಪ್ರಾಧಿಕಾರ.

3. ಭಾರತ ವಿಮಾನ ನಿಲ್ದಾಣಗಳ ಪ್ರಾಧಿಕಾರ ಅಧಿನಿಯಮ, 1994 (1994ರ 55)ರ ಮೇರೆಗೆ ವಿಮಾನ ನಿಲ್ದಾಣ ಅಪೀಲು ನ್ಯಾಯಾಧಿಕರಣ.

4. ವ್ಯಾಪಾರ ಚಿಹ್ನೆಗಳ ಅಧಿನಿಯಮ, 1999 (1999ರ 47)ರ ಮೇರೆಗೆ ಬೌದ್ಧಿಕ ಆಸ್ತಿ ಅಪೀಲು ಮಂಡಳಿ.

5. ಸಸ್ಯ ಪ್ರಭೇದಗಳು ಮತ್ತು ರೈತರ ಹಕ್ಕುಗಳ ಸಂರಕ್ಷಣಾ ಅಧಿನಿಯಮ, 2001 (2001ರ 53)ರ ಮೇರೆಗೆ ಸಸ್ಯ ಪ್ರಭೇದಗಳ ಸಂರಕ್ಷಣಾ ಅಪೀಲು ನ್ಯಾಯಾಧಿಕರಣ.